ಉಪಾಧ್ಯಕ್ಷರು : ಮಾನ್ಯ ಆಲ್ಕೋಡ್ ಹನುಮಂತಪ್ಪನವರೆ, ಇದನ್ನು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳೋಣ. ಅಷ್ಟರೊಳಗಾಗಿ ಮಾನ್ಯ ಮಂತ್ರಿಗಳು ಬರಬಹುದು.

ಶ್ರೀ ಆಲ್ಕೋಡ್ ಹನುಮಂತಪ್ಪ : ಇದು ಗಮನ ಸೆಳೆಯುವ ಸೂಚನೆ ಇರುವುದರಿಂದ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಬಂದಾಗ ಹೇಳಿದರೆ, ತಮಗೆ ಉತ್ತರ ಸಿಗುತ್ತದೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಶೂನ್ಯವೇಳೆಯಲ್ಲಿ ತೆಗೆದುಕೊಂಡರೆ ಸಾಕು.

ಉಪಾಧ್ಯಕ್ಷರು : ಆಯಿತು, ಶೂನ್ಯವೇಳೆಯಲ್ಲಿ ತೆಗೆದುಕೊಂಡರೆ, ಅಷ್ಟರೊಳಗಾಗಿ ಮಾನ್ಯ ಮಂತ್ರಿಗಳು ಬರುತ್ತಾರೆ, ಆಗ ನಿಮಗೆ ಉತ್ತರವು ಸಿಗುತ್ತದೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಬಂದಿರುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಮಾನ್ಯ ಮಾಧುಸ್ವಾಮಿಯವರೆ, ನಿಯಮ 69 ರ ಮೇಲೆ ತಾವು ಮಾತನಾಡಬಹುದು.

8. ನಿಯಮ 69 ರ ಮೇರೆಗೆ ಚರ್ಚೆ

ವಿಷಯ: ಬೆಂಗಳೂರು ಮತ್ತು ಮೈಸೂರು ಕಾರಿಡಾರ್ ಇಶ್ಯೂನಲ್ಲಿ ಬೆಂಗಳೂರು ಸುತ್ತಮುತ್ತ ಭೂಸ್ವಾಧೀನದಲ್ಲಿ ಬಹಳಷ್ಟು ಹಗರಣಗಳು ನಡೆದಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದು, ಬೆಂಗಳೂರಿನ ಅಕ್ಕ-ಪಕ್ಕದಲ್ಲಿ ಭೂಹಗರಣ ನಡೆದಿರುವ ಬಗ್ಗೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ತಾವು ಶೂನ್ಯ ವೇಳೆಯಲ್ಲಿ ವಿಷಯಗಳನ್ನು ತೆಗೆದುಕೊಂಡು ನಂತರ ತಾವು ಆರಂಭ ಮಾಡುವುದಕ್ಕೆ ಹೇಳಬೇಕು. ಅದು ನಮ್ಮ ಸಂಪ್ರದಾಯವಾಗಿದೆ. ಎರಡು-ಮೂರು ಇದ್ದರೆ ಅದರಲ್ಲಿ ಯಾವುದು ಪ್ರಮುಖವಾಗಿದೆ, ಅದಕ್ಕೆ ಮೊದಲು ಅವಕಾಶವನ್ನು ಮಾಡಿಕೊಡಬೇಕು.

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರು ಬೆಳಿಗ್ಗೆ ಕೇಳಿದಾಗ, ಅವರ ಈ ವಿಷಯ ಡಿಸ್‌ಕಂಟಿನ್ಯೂ ಆಗಿತ್ತು; To complete that subject, I have allowed under Rule 69.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ನಾನು ಭೂಹಗರಣಗಳ ಬಗ್ಗೆ ಕಳೆದ ಅಧಿವೇಶನದಲ್ಲಿಯೂ ಕೂಡ ಇಲ್ಲಿ ಮಾತನಾಡಿರುತ್ತೇನೆ. ಅಧಿವೇಶನ ನಡೆಯಬೇಕಾದರೆ, ಘನತವೆತ್ತ ಸರ್ಕಾರದ ಮಂತ್ರಿಗಳು ಇಲ್ಲಿ ಉತ್ತರವನ್ನು ಕೊಟ್ಟಿದ್ದರು, ಅಂತಹ ಯಾವ ಕೃತ್ಯವಾಗಿಲ್ಲ. ನಾನು ಬೆಳಿಗ್ಗೆ ಹೇಳಿದೆ ತಪ್ಪನ್ನು ಒಪ್ಪಿಕೊಳ್ಳುವುದು ಮನುಷ್ಯರ ದೊಡ್ಡ ಗುಣ ಎಂದು ಈಗ ಒಪ್ಪಿಕೊಂಡಿದ್ದಾರೆ, ಇಲ್ಲಾ ಸರ್ಕಾರ ತಪ್ಪು ಮಾಡಿದೆ, ಹಾಗಾಗಿ ನಾವು ಸ್ವಲ್ಪ ಜಮೀನನ್ನು ಹಿಂದೆ ಬಿಡುತ್ತೇವೆ ಎಂದು ಆ ತಪ್ಪು ಹೇಗೆ ಆಯಿತು ಎನ್ನುವುದರ ಬಗ್ಗೆ ನಾನು ಇಲ್ಲಿ ಮಾತನಾಡುವುದಕ್ಕೆ ಬಯಸುತ್ತೇನೆ. ನಾನು ಬೆಳಿಗ್ಗೆ ಹೇಳಿದೆ, ಇದಕ್ಕೆ ಪೂರಕವಾಗಿ ಮಾನ್ಯ ಕೆ.ಸಿ.ರೆಡ್ಡಿಯವರ ವರದಿಯನ್ನು ಆಧರಿಸಿ ಸರ್ಕಾರದವರು ವರದಿ ಕೊಡಿ ಎಂದು ನಾವು ಕೇಳಿದರು ವರದಿಯನ್ನು ಕೊಡಲಿಲ್ಲ. ಆದರೆ ಇವತ್ತು ಪತ್ರಿಕೆಯಲ್ಲಿ ಬಂದಿದೆ. ಹೈಕೋರ್ಟ್ ಮುಂದೆ ಘನತವೆತ್ತ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸ್ಟೇಟ್‌ಮೆಂಟ್ ಅಥವಾ ಅಫಿಡೆವಿಟ್ ಅನ್ನು ಮಾಡಿದ್ದಾರೆ, ಅದರ ಪ್ರತಿಯನ್ನು ತರಿಸಿಕೊಂಡು ನಾನು ಇದು ತುರ್ತು ಎಂದು ನಿಮ್ಮ ಗಮನಕ್ಕೆ ತರಲಿಕ್ಕೆ ಎದ್ದು ನಿಂತಿದ್ದೇನೆ. ಏನು ನಡೆದಿದೆ ಈ ಸರ್ಕಾರದಲ್ಲಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವರು ಒಪ್ಪಿಕೊಳ್ಳುತ್ತಾರೆ, ಇವರು ಯಾವ ಹಂತಕ್ಕೆ ಹೋಗಿದ್ದಾರೆಂದರೆ, ನೈಸೆಲ್ ಕಂಪನಿಗೂ ಸರ್ಕಾರಕ್ಕೂ ಸಂಬಂಧವಿಲ್ಲವೆಂದು ಅಫಿಡೆವಿಟ್ ಹಾಕುವ ಹಂತಕ್ಕೆ ಹೋಗಿದ್ದಾರೆ. ನಾವು ಎಕ್ಸೆಸ್ ಜಮೀನನ್ನು ತೆಗೆದುಕೊಂಡಿರುವುದು ನಿಜ, ಅದು ಅರ್ಥಮಿಟಿಕಲ್ ಮಿಸ್ಟೇಕ್. ಒಂದು ರಾಜ್ಯದಲ್ಲಿ 15000 ಎಕರೆ 20000 ಎಕರೆ ಜಮೀನು ಯಾರಿಗಾದರೂ ಹ್ಯಾಂಡೋವರ್ ಆಗುವುದು ಅರ್ಥಮಿಟಿಕಲ್ ಮಿಸ್ಟೇಕ್ ಅಂತೆ, ನಾನು ತಮಗೆ ಓದಿ ಹೇಳುತ್ತೇನೆ:–

'This is the copy of the affidavit filed by Hon`ble Chief secretary. The State Government has noticed certain facts and circumstances.....

ಶ್ರೀ ಎಂ.ಪಿ. ಪ್ರಕಾಶ್: ತಾವೇ ಪೆಟಿಷನರ್ ಎಂದು ಕೇಳಿದೆ. Is it true?

Sri J.C.Madhuswamy : Yes.

Sri M.P.Prakash : When you yourself is a petitioner in the High Court, can you raise it in a dual capacity here when it is sub-judice?

Sri J.C.Madhuswamy : Certainly.

Sri M.P.Prakash (Revenue Minister) : Whatever that you wanted to urge, you may urge it at the High Court itself.

Sri J.C.Madhuswamy : I have urged the High Court. You have quoted my PIL in investigation proceedings; you have quoted my PIL in constituting the committee. You have stated in your committee report that after the PIL they have conceded it.

Sri M.P.Prakash : What I humbly submit to the Hon`ble Dy.Speaker is, when he himself is a petitioner before the High Court, and the matter is a sub judice now, because he is aware of the facts and all that, the affidavit which has been filed on behalf of the Government is in full consonance with it and he doesn`t have any objection, whatsoever with regard to the averments of the affidavit as such. But what he says is, there is lacuna, there is negligence on the part of the Government and all that you wanted to attack it. That you will do in any case at the High Court.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಈ ಅಫಿಡೆವಿಟ್‌ಗೆ ವಿರುದ್ಧವಾಗಿ ಹೈಕೋರ್ಟಿನಲ್ಲಿ ಮಾಡುವ ವಾದಗಳನ್ನು ನಾವು ಮಾಡುತ್ತೇವೆ. .Material lapses, ನಿಮ್ಮ ಆಡಳಿತಾತ್ಮಕ administrative lapses, which you have conceded in the affidavit. It is a public document. It is an affidavit. It is not the petition filed by me or your reply. It is the affidavit of the Government before the High Court of Karnataka, which is a public document. 164 ಅಪ್ಲಿಕೇಷನ್ ಕಾಪಿ ತೆಗೆದುಕೊಂಡು ಬರುವುದು, ಅಫಿಡೆವಿಟ್ ಕಾಪಿ ತೆಗೆದುಕೊಂಡು ಬಂದು ಕೋಟ್ ಮಾಡುವುದು ಯಾವ ನಿಯಮ ಬಾಹಿರವೂ ಅಲ್ಲ ಸನ್ಮಾನ್ಯ ಪ್ರಕಾಶ್‌ರವರೇ, That never prevents me in proceeding with the case in the High Court. I am not going to the merit of the case. I don`t argue what the High Court of Karnataka will

give decision on this behalf. My contention is, Government has accepted, Government has conceded our demand of the Assembly when we started the issue. ನಾವು ಇದನ್ನು ಇಲ್ಲಿ ರೈಸ್ ಮಾಡಿರುವುದನ್ನು ಒಪ್ಪಿಕೊಂಡಿದ್ದೀರಿ, ಮತ್ತು ಕಮಿಟಿ ಮಾಡಿದ್ದೀರಿ. ಕಮಿಟಿ ಆದ ಮೇಲೆ ನೀವು ಗವರ್ನಮೆಂಟ್ ಆರ್ಡರನ್ನು ಇಶ್ಯೂ ಮಾಡಿದ್ದೀರಿ. ಹೈಕೋರ್ಟಿನಲ್ಲಿದೆಯೆಂದು ನೀವು ಗವರ್ನಮೆಂಟ್ ಆರ್ಡರನ್ನು ಇಶ್ಯೂ ಮಾಡುವುದನ್ನು ನಿಲ್ಲಿಸಲಿಲ್ಲವಲ್ಲಾ. you have issued a Government Order when the matter was pending before the Court. ಅದು sub-judice ಅಲ್ಲವೇ ಎಂದು ನಾನು ತಮಗೆ ಕೇಳುತ್ತೇನೆ. How could you issue a Government Order ಅದು ಅಲ್ಲ ಅಂದರೆ ನಾನು ಮಾತನಾಡುವುದಕ್ಕೆ ಬರುವುದಿಲ್ಲ Because, Government order, ಆದ ಮೇಲೆ it is a public document. Affidavit filed before the court is a public document.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾನ್ಯ ಅಧ್ಯಕ್ಷರು ಮತ್ತೊಂದು ರೂಪದಲ್ಲಿ ಚರ್ಚೆಗೆ ತಗೆದುಕೊಳ್ಳಬೇಕೆಂದು ಹೇಳಿರುವ ಕಾರಣಕ್ಕಾಗಿ ಅವರು ಮಾಡುವಂತಹ ಚರ್ಚೆಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಅವರು ಈ ವಿಚಾರವನ್ನು ಅರ್ಜಿದಾರರಾಗಿ ಅಲ್ಲಿ ಅರ್ಜ್ ಮಾಡಿರುವ ಕಾರಣವಿರುವುದರಿಂದ ನಮ್ಮ ಪ್ರಮಾಣಪತ್ರವೂ ಕೂಡ ಸರ್ಕಾರದ ಪರವಾಗಿ ಹಾಕಿರತಕ್ಕಂಥದ್ದು, ಅವರ ವಾದಕ್ಕೆ ಪೂರಕವಾದಂತಹ ರೀತಿಯಲ್ಲಿ ಇರತಕ್ಕಂತಹ ಒಂದು ಪ್ರಾಮಾಣಿಕತೆಯನ್ನು ಈ ಸರ್ಕಾರ ತೋರಿಸಿದೆ. ಈ ಸಂದರ್ಭದಲ್ಲಿ ಇದನ್ನು ದೀರ್ಘವಾಗಿ ಎಳೆಯಬೇಕೇ ಅಥವಾ ಎಳೆಯಬಾರದೇ ಮತ್ತು ಸಬ್‌ಜುಡೀಸ್ ಆಗುತ್ತದೆ ಎಂಬುದು ಮುಖ್ಯ ಆದರೆ ನಾನು ಚರ್ಚೆಗೆ ಅಡ್ಡ ಬರುವುದಿಲ್ಲ. ಏಕೆಂದರೆ ಮಾನ್ಯ ಅಧ್ಯಕ್ಷರು ಈಗಾಗಲೇ ಇದಕ್ಕೆ ಮತ್ತೊಂದು ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. It is for him to take a decision. ನೋಡಿ. ಇದು ಸೂಕ್ಷ್ಮವಾದ ವಿಚಾರ. ಇದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

SRI J.C. MADHUSWAMY : I accept the advice given by Hon'ble Minister. ನನ್ನ contention ಇಷ್ಟೇ. When you have accepted, ಹೆಚ್ಚುವರಿ ಜಮೀನನ್ನು ಸ್ವಾಧೀನ ಮಾಡಿಸಿದ್ದೇವೆ. ಹೆಚ್ಚುವರಿ ಜಮೀನನ್ನು

ಲ್ಯಾಂಡ್ ಅಲೈನ್‌ಮೆಂಟ್ ಏರಿಯಾದಿಂದ ಆಚೆ ತೆಗೆದುಕೊಂಡಿದ್ದೇವೆ. ಕೆ.ಸಿ.ರೆಡ್ಡಿ ವರದಿಯನ್ನು ಇನ್ ಟೋಟೋ ನಾವು ಅಕ್ಸೆಪ್ಟ್ ಮಾಡಿದ್ದೇವೆಂದು ತಾವು ಹೇಳಿ ಅದನ್ನು ತಾವು ಇಂಪ್ಲಿಮೆಂಟ್ ಮಾಡಿಲ್ಲವೆಂದು ನಾನು ಅಷ್ಟಕ್ಕೇ ನಿಂತಿರುವುದು. I am not going to the merit of the case which is pending before Hon'ble High Court of Karnataka. ಇಲ್ಲಿ ಮಾನ್ಯ ಅಧ್ಯಕ್ಷರೆ, ಇಲ್ಲಿ ಕೇಸ್ ಇದೆ. ಕೇಸಿನಲ್ಲಿ status-quo orders ಇವೆ. ಕೇಸಿಗಿಂತ ಮೊದಲೇ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. Government Order issue ಮಾಡಿದ್ದಾರೆ. ಹೆಚ್ಚುವರಿ ಜಮೀನನ್ನು ನಾವು ವಾಪಸ್ ಕೊಡುತ್ತೇವೆಂದು public statements ಮಾಡಿದ್ದಾರೆ. ಅದರಲ್ಲಿ ಏನಾಗಿದೆಯೆಂದರೆ, ಎಲ್ಲೆಲ್ಲಿ ಹೆಚ್ಚುವರಿ ಜಮೀನು ಇದೆ ಎಂಬುದರ ಬಗ್ಗೆ ಟೆಕ್ನಿಕಲ್ ಕಮಿಟಿಯವರು ಇವರಿಗೆ ಹೇಳಿದ್ದಾರೆ, ಇಂತಿಂತಹ ಕಡೆ ಹೆಚ್ಚುವರಿ ಜಮೀನು ಇದೆ. ಇಂತಿಂತಹ ಅಧಿಕಾರಿಗಳ ಕಾಲದಲ್ಲಿ ಇಷ್ಟಿಷ್ಟು ಹೆಚ್ಚುವರಿ ಜಮೀನು ಆಯಿತು ಎಂದು ಆ ಹೆಚ್ಚುವರಿ ಜಮೀನನ್ನು ಕೋರ್ಟ್ ಮುಂದೆ ನಾವು ಪೊಸೆಷನ್‌ನಲ್ಲಿ ಇದ್ದೇವೆಂದು ಅಥವಾ ಆ ಕಂಪನಿಯವರು ಇನ್ನೊಬ್ಬರಿಗೆ ಯಾರಿಗೋ ಕೊಟ್ಟಿದ್ದಾರೆ ಎನ್ನುವುದು ಕೂಡ ಸ್ಟೇಟಸ್–ಕೋ ಮೆಂಟೇನ್ ಮಾಡಿ ಎಂದು ಹೇಳಿದೆ. ಇದೆಲ್ಲವೂ ಇದ್ದಾಗಲೂ ಕೂಡ ಸರ್ಕಾರ ನಿಷ್ಕ್ರೀಯವಾಗಿ ಬಿಟ್ಟಿದೆ. ಸರ್ಕಾರ, ಮದನಾಯಕನಹಳ್ಳಿಯಲ್ಲಿ, ನಾನು ಕೇಳುತ್ತೇನೆ, ನಿಮ್ಮ ಇಂಟರ್ ಚೇಂಜ್ ಏರಿಯಾದಿಂದ ಆಚೆ ಇರುವ ಜಾಗವನ್ನು ಯಾಕೆ ರೈತರಿಗೆ ಬಿಡುತ್ತಿಲ್ಲ? ಏತಕ್ಕಾಗಿ ಪ್ರೊಟೆಕ್ಟ್ ಮಾಡುತ್ತಿಲ್ಲ? ನಿಮ್ಮ ಟೆಕ್ನಿಕಲ್ ಕಮಿಟಿ ಕ್ಲಿಯರ್ ಕಟ್ ಆಗಿ ಹೇಳಿದೆ. if at all, ಆ ಜಮೀನನ್ನು ತೆಗೆದುಕೊಂಡಿದ್ದರೂ ಕೂಡ if it is found unnecessary, ಅದನ್ನು ನೀವು ಸ್ವಾಧೀನಪಡಿಸಿಕೊಳ್ಳಬಾರದು. ಅದನ್ನು ಭೂಮಾಲೀಕರಿಗೆ ವಾಪಸ್ ಕೊಡಬೇಕು ಎಂದು. ಆದರೆ ಕೊಟ್ಟಿಲ್ಲ. ಆರ್ಡರನ್ನು ಮಾಡಿದ್ದೀರಿ, ಆರ್ಡರನ್ನು ಹೇಗೆ ಮಾಡಿದ್ದೀರಿ? ಏಕೆ ಮಾಡಿದ್ದೀರಿ? ಎಂಬ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ನಾನು ಮಾತನಾಡುತ್ತಿರುವುದು ಸರಿ ಎಂದು ಒಪ್ಪಿಕೊಂಡಿರುವುದನ್ನು ನಾನು ವಿರೋಧ ಮಾಡುತ್ತಾ ನಿಂತುಕೊಳ್ಳುವುದು ವಿರೋಧಾಭಾಸವನ್ನು ಇಲ್ಲಿ ಸೃಷ್ಟಿ ಮಾಡುವುದಿಲ್ಲ. My contention is, Government has erred at every stage. ಇದನ್ನು ನಾನು ಏತಕ್ಕೆ ಕೋಟ್ ಮಾಡುವುದಕ್ಕೆ ಹೋಗುತ್ತಿದ್ದೆ ಎಂದರೆ, ಈ ಪ್ರಾಜೆಕ್ಟನ್ನು ಆನ್ ಮಾಡಿದ ದಿವಸದಿಂದ, since the inception of the project,

till this date, everyone has erred. ಎಲ್ಲಾ ಹಂತದಲ್ಲೂ ತಪ್ಪುಗಳಾಗಿವೆ ಎಂದು ಅವರು ಒಪ್ಪಿದ್ದಾರೆ. ಅವರೇ ಅಫಿಡೆವಿಟ್‌ನಲ್ಲಿ ಒಪ್ಪಿದ್ದಾರೆ. ಅದನ್ನು ನಾನು ಒಂದೆರಡು ಕೋಟ್ ಮಾಡಲೇಬೇಕಲ್ಲಾ ತಪ್ಪು ಹೇಗಾಯಿತು ಎಂದು ಸರ್ಕಾರಕ್ಕೆ ಹೇಳದೇ ಇದ್ದರೆ ನಾನು ಅವತ್ತು ಗಂಟೆಗಟ್ಟಲೆ ನಿಂತುಕೊಂಡು ಮಾತನಾಡಿದ್ದಕ್ಕೆ ಏನರ್ಥ? ನಾನು ಹೇಳುತ್ತೇನೆ ಉಪಾಧ್ಯಕ್ಷರೇ, It is clear that in the affidavit before the Court, the State Government has noticed certain facts and circumstances that revealed are fraud and mis-representation. Further, certain questions were raised'ಅದು ಬಿಟ್ಟುಬಿಡಿ. '..constituted by Government headed by Sri K.C.Reddy, who was the Secretary to Government, Public Works Department. After detailed discussion, the Cabinet reaffirmed the support of the Government to the project. However, in view of the criticism regarding the acquisition of more lands than necessary for the project, cabinet decided to constitute an expert committee .' ಆಯಿತಲ್ಲಾ ಸರ್, ಅಲ್ಲಿಂದ ಮುಂದಕ್ಕೆ ಬಂದು, ಸರ್, ಇವರು ಏನು ಹೇಳುತ್ತಾರೆ ನೋಡಿ ಸರ್, ನಾನು ಅವತ್ತು ಏನು ವಾದ ಮಾಡಿದೆ, ನನಗೆ ಈ ಹೌಸ್‌ನಲ್ಲಿ ಏನು ಜಸ್ಟೀಸ್ ಸಿಕ್ಕಿತು, ನನಗೆ ಏನಾಯಿತು ಎಂಬುದರ ಬಗ್ಗೆ. 'Against the judgment dated 21.9.1998, writ petition so and so, SLP was filed and SLP was dismissed summarily. 'It is humbly submitted that the said judgment is not conclusive proof of what it states, in view of Section 42 of the Indian Evidence Act, the person who has filed an affidavit in support of the statement in the said writ petition has now become an employee of the NICEL. He was handling the matter throughout and he had verified the affidavit filed in the state.' ಮುಂದಕ್ಕೆ ಬಂದು, 'It has been proposed to acquire 13,232 acres of private land and it was also proposed to transfer 6,956 acres of government land totaling 20,193 acres.' ಇಲ್ಲಿಂದ ಬಂದು ತಾವು ಎಷ್ಟು ಮಾಡಿದಿರಿ, ಏಕೆ ಮಾಡಿದಿರಿ ಎಂಬುದು ನನಗೆ ಅರ್ಥ ಆಗಬೇಕು ಮಾನ್ಯ ಸಿಂಧ್ಯರವರೇ, ಮಾನ್ಯ ರಾಜ್ಯಪಾಲರು ಇದರ ಬಗ್ಗೆ ಒಂದು ಇನ್ವೆಸ್ಟಿಗೇಷನ್ ಮಾಡಿ ಎಂದು ನಿಮಗೆ ಬರೆದರು, ನೋಡಿ ಇಂತಹವರ ಮನವಿಯ ಮೇರೆಗೆ

ನಾನು ಬರೆಯುತ್ತಿದ್ದೇನೆ, ಇಂತಿಂತಹ ಕಡೆ ಇಷ್ಟಿಷ್ಟೇ ಜಾಸ್ತಿ ಜಮೀನನ್ನು ನೀವು ಅಕ್ವೈರ್ ಮಾಡಿದ್ದೀರಿ ಎಂದು. ಕರ್ನಾಟಕದ ಘನತವೆತ್ತ ರಾಜ್ಯಪಾಲರಿಗೆ ಆವತ್ತು ಗೌರವ ಸಿಗಲಿಲ್ಲ ಸರ್ Nobody conceded. ಈಗ ನೀವು ಒಪ್ಪುತ್ತಿದ್ದೀರಿ. ತಾವು ಏನೆಂದು ಹೇಳುತ್ತೀರೆಂದರೆ,'The Consortium completely indicates that the required one thousand hectare nearly 2,500 acres for each township. But under Clause 517, what is suggested by the consortium indicates that what was required for each township was only 1,102 acres. This is clearly an arithmetical mistake.' ಒಂದು ಸಾವಿರದ ನೂರ ಎರಡು ಎಕರೆಗೆ ಬದಲು ಎರಡು ಸಾವಿರದ ಐದುನೂರು ಎಕರೆ ಒಂದು ಟೌನ್‌ಷಿಪ್ ನಿರ್ಮಾಣ ಮಾಡಲು ಜಾಗ ಬೇಕು ಅಂತ ಆಗಿದ್ದು. it is clearly an arithmetical mistake. ಈ ರಾಜ್ಯದಲ್ಲಿ ಸರ್ಕಾರ ನಡೆದಿದೆ. 'Arithmetical mistake, which the respondent had not noticed. There are so many arithmetical and clerical mistakes in the technical report submitted in the month of August 1995.' ಒಂದು ರಾಜ್ಯಸರ್ಕಾರ ವರ್ತಿಸುವ ರೀತೀನಾ ಇದು? ಒಂದು ರಾಜ್ಯಸರ್ಕಾರ ಕೆಲಸ ಮಾಡುವ ರೀತೀನಾ ಇದು ಎಂದು ನಾನು ಕೇಳಬೇಕಲ್ಲಾ? When you accept that there was an arithmetical mistake, which caused the excess acquisition of land to the tune of thousands of acres. Arithmetical mistake ಅಂತೆ, ಸನ್ಮಾನ್ಯ Industries Minister ರವರೆ, ನಿಮ್ಮ ಚೀಫ್ ಸೆಕ್ರೆಟರಿಯವರೇ ಅಫಿಡೆವಿಟ್‌ನಲ್ಲಿ ಹೇಳಿರುವುದು. ಆಮೇಲೆ ಎಂಟೈರ್ ಥಿಂಗ್ ಏನಾಗಿದೆ ಎಂದರೆ ' Infrastructure Corridor Limited, Bangalore, but it now transferred as said in representation NICEL was established by the consortium of three companies is not true and GOK is not a party to so called assignment deed.'ಯಾರ ಜೊತೆ ನೀವು ಲ್ಯಾಂಡ್ ಅಕ್ವೈರ್ ಮಾಡಿಕೊಂಡಿದ್ದೇವೆಂದು ಅಗ್ರಿಮೆಂಟ್ ಮಾಡಿಕೊಂಡು, ಇಷ್ಟೊಂದು ಲ್ಯಾಂಡನ್ನು ಅಕ್ವೈರ್ ಮಾಡಿ ಅವರಿಗೆ ಕೊಟ್ಟಿದ್ದೀರಿ, ತಾವು ಹೈಕೋರ್ಟ್ ಮುಂದೆ ಹೇಳುತ್ತಿದ್ದೀರಿ ಸರ್, ' It is not true and GOK is not a party to the so called assignment deed.'ಮೂರು ಕಂಪನಿಗಳು ಸೇರಿ consortium ಆಗಿದ್ದಕ್ಕೆ ಅಸೈನ್‌ಮೆಂಟ್ ಡೀಡ್.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕಾ ಸಚಿವರು) : ಸರ್ಕಾರದ ನಿಲುವು ಏನು ಎಂಬುದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಮೊನ್ನೆ ತಾನೇ ನಮ್ಮ ಮುಖ್ಯ ಕಾರ್ಯದರ್ಶಿಗಳ ಮೂಲಕ ಹೈಕೋರ್ಟಿನ ಮುಂದೆ ಹೋಗಿದ್ದೇವೆ. ಇವರೇ ಸ್ವತ: ಅರ್ಜಿದಾರರಾಗಿದ್ದಾರೆ, ಈ ಹಂತದಲ್ಲಿ ಪ್ರತಿಯೊಂದನ್ನೂ ನೀವು ಪ್ರಶ್ನೆ ಮಾಡಿಕೊಂಡು ಕುಳಿತುಕೊಂಡರೆ, ನ್ಯಾಯಾಲಯದ ತೀರ್ಪಿನ ಮೇಲೆ ಇದರ ಪರಿಣಾಮವಾಗುವುದಿಲ್ಲವೇ? ಇದನ್ನು ಮಾನ್ಯ ಸದಸ್ಯರುಗಳು ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಹಿಂದೆ ತಾವೇನು ಅನೇಕ ವಿಚಾರಗಳನ್ನು ಹೇಳಿದ್ದಿರಿ, ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸರ್ಕಾರ ಈವತ್ತು ಯೋಜನೆಗೆ ವಿರುದ್ಧವಾಗಿಲ್ಲ, ರಸ್ತೆ ನಿರ್ಮಾಣ ಮಾಡುವುದರ ಬಗ್ಗೆ ಸರ್ಕಾರ ವಿರುದ್ಧವಿಲ್ಲವೆಂದು ನಾವು ಸ್ಪಷ್ಟಪಡಿಸಿದ್ದೇವೆ; ಆದರೆ ಯೋಜನೆಯಲ್ಲಿ ಕೆಲವು ವ್ಯತ್ಯಾಸಗಳಿವೆ, ನ್ಯೂನತೆಗಳಿವೆ, ಅದನ್ನು ಸರಿಪಡಿಸುವ ದೃಷ್ಟಿಯಿಂದ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ತಾವು ಅರ್ಜಿದಾರರಾಗಿ ಹೈಕೋರ್ಟಿನ ಮುಂದೆ ಹೋಗಿದ್ದೀರಿ, ಆದರೆ ಈ ವಿಷಯದಲ್ಲಿ ಮುಖ್ಯ ಕಾರ್ಯದರ್ಶಿಗಳ ಮುಖಾಂತರವೇ ಹೈಕೋರ್ಟ್‌ನಲ್ಲಿ ಅಫಿಡೆವಿಟ್ ಅನ್ನು ಹಾಕಬೇಕೆಂದು ಕೋರ್ಟ್ ಆದೇಶಿಸಿದ ಪ್ರಕಾರ ನಾವು ಅದನ್ನು ಪಾಲಿಸಿದ್ದೇವೆ. ಹಾಗಾಗಿ ಈ ಹಂತದಲ್ಲಿ ಕೋರ್ಟ್ ಮುಂದೆ ಇರತಕ್ಕಂತಹ ವಿಚಾರವನ್ನು ಚರ್ಚೆ ಮಾಡತಕ್ಕಂಥದ್ದು ಅಷ್ಟೊಂದು ಸಮಂಜಸವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ ಈಗ ಸದನದಲ್ಲಿ ಲೋಕೋಪಯೋಗಿ ಸಚಿವರು ಹಾಗೂ ಮುಖ್ಯಮಂತ್ರಿಗಳು ಸಹಿತ ಇಲ್ಲ, ಈ ಸಂದರ್ಭದಲ್ಲಿ ಇವರು ಎತ್ತುವಂತಹ ಎಲ್ಲಾ ಪ್ರಶ್ನೆಗಳಿಗೂ ನಾವು ಸವಿಸ್ತಾರವಾಗಿ ಉತ್ತರಿಸಬೇಕಾಗುತ್ತದೆ. ಈ ವಿಷಯ ಕೋರ್ಟಿನ ಮುಂದೆ ಇರುವುದರಿಂದ ಇದನ್ನು ನಿಲುವಳಿ ಸೂಚನೆ ಅಥವಾ ನಿಯಮ 69 ರಡಿಯಲ್ಲಿ ಚರ್ಚೆ ಮಾಡತಕ್ಕಂಥದ್ದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಪದೇ ಪದೇ ಹೇಳುತ್ತಿದ್ದೇನೆ, ಏನೆಂದರೆ ಮಿನಿಟ್ ಆಫ್ ದಿ ಕೇಸ್ ಹಾಗೂ ಸರ್ಕಾರ ಹಾಕಿರುವ ಅಫಿಡೆವಿಟ್‌ಗೂ ಏನೂ ಸಂಬಂಧವಿಲ್ಲ. ಸರ್ಕಾರ ಹೈಕೋರ್ಟ್‌ನ ಮುಂದೆ ಒಪ್ಪಿಕೊಂಡಿದೆ. ಒಂದು ಫ್ರಾಡ್ ಕಂಪೆನಿ ಇದ್ದುದ್ದರ ಜೊತೆ ನಾವು ಲ್ಯಾಂಡ್ ಅನ್ನು ಹ್ಯಾಂಡ್ ಓವರ್ ಮಾಡಿದ್ದೇವೆಂದು ಸರ್ಕಾರ ಕೋರ್ಟಿನ ಮುಂದೆ ಅಫಿಡೆವಿಟ್ ಹಾಕಿ ಒಪ್ಪಿಕೊಂಡಿದೆ. ಕೇಸ್ ಏನಾಗುತ್ತದೋ ಆಗಲಿ ಅದು ನನ್ನ

ಹಣೆಬರಹ, "I cannot pre-conceive a Judgment. But Government stand today is, they have accepted before the Hon`ble High Court of Karnataka ನಾವು ಒಂದು ಫ್ರಾಡ್ ಕಂಪೆನಿಯೊಂದಿಗೆ ವ್ಯವಹಾರ ಮಾಡಿದ್ದೇವೆಂದು ಹೇಳಿದ್ದಾರೆ. ನಾವು ಮಾಡಿರುವ ತಪ್ಪುಗಳಿಗೆಲ್ಲಾ ಅರ್ತಮೆಟಿಕಲ್ ಮಿಸ್ಟೇಕ್ಸ್ ಎಂದು ಹೇಳಿದ್ದಾರೆ. ನಾವು ಮಾಡಿರುವ ವ್ಯವಹಾರಗಳನ್ನು ಅವರಿಗೂ ನಮಗೂ ಸಂಬಂಧವಿಲ್ಲದವರೊಂದಿಗೆ ವ್ಯವಹರಿಸಿದ್ದೇವೆಂದು ಹೇಳಿದ್ದಾರೆ. ಆ ದಿವಸ ಗಂಟೆಗಟ್ಟಲೆ ಭಾಷಣ ಮಾಡಿದ್ದು ಏತಕ್ಕೆಂದರೆ, ಇದನ್ನು ನಿಮಗೆ ಎಸ್ಟಾಬ್ಲಿಷ್ ಮಾಡಬೇಕೆಂದು; ಈಗ ನನ್ನ ಪ್ರಶ್ನೆ ಏನೆಂದರೆ ಇವೆಲ್ಲಾ ಮಾಡಿದವರ ಮೇಲೆ ಕ್ರಮವನ್ನು ಜರುಗಿಸುವಿರಾ? ಇಲ್ಲಿರುವ ಚೀಫ್ ಇಂಜಿನೀಯರೊಬ್ಬರು ಹಾಗು ನಿಮ್ಮ ಸೆಕ್ರೆಟರಿ, ಪಿ.ಡಬ್ಲ್ಯು.ಡಿ.ಯವರ ಅಗ್ರಿಮೆಂಟ್‌ಗೆ ಎಂಟರ್ ಆಗಿ ಅವರ ಜೊತೆಯಲ್ಲಿ ಇದ್ದಾರೆ ಎಂದು ಹೇಳಿದ್ದೆವು, ಮತ್ತೆ ಅವರನ್ನು ರೂಲ್ ಔಟ್ ಮಾಡಿದ್ದೀರಿ, ಆದರೆ ಅವರು ಹೋಗಬಾರದೆಂದು ತಾವು ಏತಕ್ಕೆ ಹೇಳುತ್ತಿದ್ದೀರಿ, ಅವರಿಗೆ ಅಥಾರಿಟಿ ಇರಲಿಲ್ಲವೆಂದೇ? he has not brought it before the Government or the Cabinet before signing the agreement or handing over the land ಪಿ.ಡಬ್ಲ್ಯು.ಡಿ. ಸೆಕ್ರೆಟರಿಯವರಿಗೆ ಅಥಾರಿಟಿ ಇರಲಿಲ್ಲವೆಂದು ನೀವು ಹೈಕೋರ್ಟಿನ ಮುಂದೆ ಹೇಳಿದ್ದೀರಿ..what is all this going on in this State? ಯಾವುದೋ ಸಣ್ಣ ಮಿಸ್ಟೇಕ್ ಎಂದು ಇಲ್ಲಿ ಕುಳಿತು ಮಾತನಾಡಲಿಕ್ಕೆ ಈಗ ಎದ್ದು ನಿಂತಿಲ್ಲ, ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, when they confess .... they have confessed. ಪಾಪ ಮಾಡಿದ್ದೇವೆಂದು ಸಾರ್ವಜನಿಕವಾಗಿ ನೀವು ಒಪ್ಪಿಕೊಂಡಿದ್ದೀರಿ, ಅದಕ್ಕೆ ಪ್ರಾಯಶ್ಚಿತ್ತಪಡಬೇಕು.. ನಾನೇನು ಡಿಮ್ಯಾಂಡ್ ಮಾಡುತ್ತಿದ್ದೇನೆಂದರೆ, ನಾನು ಬ್ರೋಚರ್ ಅನ್ನು ನಿಮಗೆ ತೋರಿಸುತ್ತೇನೆ, ಸೈಟನ್ನು ಮಾಡಿ ಮಾರುತ್ತೇನೆಂದು ಹೇಳಿ ಬಂದಂತಹ ಕಂಪೆನಿಗೆ ನೀವು ಇಷ್ಟೆಲ್ಲಾ ವ್ಯವಹಾರ ಮಾಡಿರುವುದನ್ನು ಬಿಟ್ಟರೆ, ರಸ್ತೆ ಎಷ್ಟು ಉದ್ದ ಮಾಡಿದ್ದಿರಿ? ರಸ್ತೆ ಎಲ್ಲಿಗೆ ಹೋಯಿತು? ಇದುವರೆಗೂ ರಸ್ತೆಯನ್ನು ಏತಕ್ಕೆ ಮಾಡಲಿಲ್ಲ ? ಎಂದು ಇವತ್ತಿನವರೆಗೂ ತಾವು ಕೇಳಲಿಲ್ಲ. 10 ವರ್ಷದ ಕೆಳಗೆ ಆದ ಪ್ರಾಜೆಕ್ಟ್, 30 ವರ್ಷದೊಳಗೆ ಮುಗಿಯಬೇಕಾಗಿದ್ದ ಪ್ರಾಜೆಕ್ಟ್‌ನ ಇಂಪ್ಲಿಮೆಂಟೇಷನ್ ಮಾಡಲಿಕ್ಕೆ ಸರ್ಕಾರ ನಡೆಸುತ್ತಿರುವವರು ಪ್ರಯತ್ನವನ್ನು ಮಾಡಲಿಲ್ಲ. ಈಗ ಪ್ರಸ್ತುತವಾಗಿ ಪರಿಸ್ಥಿತಿ ಏನಾಗಿದೆಯೆಂದರೆ,

ನೀವು ಇಷ್ಟೆಲ್ಲಾ ಸರ್ಕಾರವನ್ನು ಇಟ್ಟುಕೊಂಡು ನೀವು ಕನ್‌ಫೆಷನ್ ಮಾಡಿಕೊಂಡು ಗೌರ್ನಮೆಂಟ್ ಆರ್ಡರ್ ಇಷ್ಯೂ ಮಾಡಿದ್ದರೂ ಸಹ ಅವರು ಇವತ್ತಿಗೂ ಕೂಡ ಕೆಲವು ಲ್ಯಾಂಡ್‌ಗಳನ್ನು ಅಕ್ವೈರ್ ಮಾಡುತ್ತಿದ್ದಾರೆ. ಈವತ್ತೂ ಪೊಲೀಸರನ್ನು ಕರೆದುಕೊಂಡು ಹೋಗಿ ಕೆಲವು ಲ್ಯಾಂಡ್‌ಗಳನ್ನು ಫೆನ್ಸಿಂಗ್ ಮಾಡಿಸುತ್ತಿದ್ದಾರೆ. ಆ ಸ್ಥಿತಿಗೆ ಬಂದಿದೆ ಇಷ್ಟೆಲ್ಲಾ ಆಗಿದ್ದರು ಸಹ ಅವರು ನಿಮ್ಮ ಸರ್ಕಾರದ ಬಗ್ಗೆ ಏನು ಮಾತನಾಡುತ್ತಿದ್ದಾರೆ ಅದನ್ನು ನಿಮಗೆ ಬಿಟ್ಟುಬಿಡುತ್ತೇನೆ. ಗೌರವವನ್ನು ಉಳಿಸಿಕೊಳ್ಳುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು, ಪೇಪರ್‌ಗಳಲ್ಲಿ ಏನೇನು ಕಾಮೆಂಟ್ಸ್ ಬರುತ್ತಿದೆ ಎಂಬ ಬಗ್ಗೆ ಓದಿ what is the comment they are making against this Government. ನಾನು ಮಾತನಾಡುವುದಿಲ್ಲ, ನನ್ನ ಹಣೆಬರಹವಲ್ಲ ಇದು, ನಿಮ್ಮ ಹಣೆಬರಹ ಇದು, ಒಂದು ಗೌರವಯುತವಾದ ಸರ್ಕಾರ ಈ ರೀತಿ ನಡೆದುಕೊಳ್ಳಬೇಕೇ ಎಂದು ನಾನು ಕೇಳುತ್ತೇನೆ. ಯಾರೊಂದಿಗೆ ನೀವು contract ಮಾಡುತ್ತೀರಿ, ಅವರು ಪಬ್ಲಿಕ್ ಆಗಿ ನಿಮ್ಮ ಬಗ್ಗೆ ಏನು ಮಾತನಾಡುತ್ತಾರೆ ಎಂಬುದನ್ನು ಕೇಳಬೇಕು; not in a private conference, ಪಬ್ಲಿಕ್‌ನಲ್ಲಿ through media, through press ,ಇದು ಕಂಟೆಂಪ್ಟ್ ಆಗುತ್ತದೆ, ಕೇಸ್ ಇರುವಾಗ ನೀವು ಸರ್ಕಾರವನ್ನು ಈ ರೀತಿ ಟೀಕೆ ಮಾಡಬಾರದು ಎಂದು ನೀವು ಹೇಳುವುದಿಲ್ಲ. you never file affidavit berore the court. ಈಗ ನಾನು ಇದರಲ್ಲಿ ನಿಮಗೆ ಒತ್ತಾಯ ಮಡುವುದು ಏನೆಂದರೆ ಇದರಲ್ಲಿ ಯಾರ್‍ಯಾರು ಶಾಮೀಲಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಕೋರ್ಟ್ ತೀರ್ಮಾನ ನಮ್ಮದು, ಈ ಅಸೆಂಬ್ಲಿಯಲ್ಲಿ ನಿಮಗೆ ಒತ್ತಾಯ ಮಾಡುವುದು ಏಕೆಂದರೆ, ನೀವು ಸರ್ಕಾರದವರು ಕೆ.ಸಿ.ರೆಡ್ಡಿಯವರ ಕಮಿಟಿಯ ರಿಪೋರ್ಟ್‌ನ್ನು ಒಪ್ಪಿದ್ದೀರಿ, ಯಾವ್ಯಾವ ಅಧಿಕಾರಿ ನಿಮಗೇ ಮೋಸಮಾಡಿ ಈ ದಂಧೆಯನ್ನು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವಿರಾ? ಯಾರ್‍ಯಾರು ತಮ್ಮ ಸ್ವಾರ್ಥಕ್ಕಾಗಿ ಇಡೀ ರಾಜ್ಯದ ರೈತರನ್ನು ಬಲಿ ಕೊಟ್ಟಿದ್ದಾರೆ, ಅವರ ಜಮೀನುಗಳನ್ನು ಹೆಚ್ಚುವರಿಯಾಗಿ ಒತ್ತುವರಿ ಮಾಡಿದ್ದಾರೆಂದು ನೀವು ಒಪ್ಪಿಕೊಂಡಿದ್ದೀರಿ ಅವರ ಮೇಲೆ ಕ್ರಮ ಜರುಗಿಸುತ್ತೀರಾ? ತೀರ್ಮಾನ ನಿಮಗೆ ಬಿಟ್ಟಿದ್ದು. you are a Government ಕೋರ್ಟ್‌ನಲ್ಲಿ ಇರವುದು ನಮಗೆ ನಿಮಗೆ ಕೇಸ್ ನಡೆಸಿಕೊಳ್ಳಿ, ಈ ಸರ್ಕಾರಕ್ಕೆ ಮೋಸವನ್ನು ಮಾಡಿದ್ದಾರೆ, ನಮ್ಮ ಕ್ಯಾಬಿನೆಟ್‌ಗೆ ಬರದೇ ಇವತ್ತು ಲ್ಯಾಂಡನ್ನು

ಹ್ಯಾಂಡ್ ಓವರ್ ಮಾಡಿಕೊಂಡು ಅಗ್ರಿಮೆಂಟ್‌ಗಳಿಗೆ ಸಹಿ ಮಾಡಿದ್ದಾರೆಂದು ನೀವು ಹೇಳಿದ್ದೀರಲ್ಲಾ ಅದನ್ನು ನೀವು ಒಪ್ಪುತ್ತೀರಾ? ಹೈಕೋರ್ಟ್‌ನ ಮುಂದೆ ಒಪ್ಪಿದವರು ನಮ್ಮ ಮುಂದೆ ಒಪ್ಪಿಕೊಳ್ಳಿ, ಕ್ರಮವನ್ನು ಜರುಗಿಸಿ, ಇದರ ಪರಿಣಾಮ ಏನಾಗಿದೆ ಎಂದರೆ, ಸಮ್ಮಿಶ್ರ ಸರ್ಕಾರದಲ್ಲಿ ನಾವು ಮಾಡಿದ್ದೇವೆಂದು ಯಾರೂ ಹೇಳುವುದಿಲ್ಲ, ನೀವೂ ಮಾಡಿದ್ದೀರಿ, ನಾವೂ ಮಾಡಿದ್ದೇವೆ, ಏನು ನಿಮ್ಮಿಬ್ಬರ ವ್ಯವಹಾರದಲ್ಲಿ ಬೆಂಗಳೂರಿನ ಜಮೀನುಗಳನ್ನೆಲ್ಲಾ ಸ್ವಾಹಾಮಾಡಿಬಿಟ್ಟರೆ ನಾವು ಏನೂ ಇಲ್ಲದವರು ಸುಮ್ಮನೆ ಎದ್ದು ನಿಂತುಕೊಂಡು ನೋಡಬೇಕೇ ಎಂದು ಈಗ ನಾವು ಎದ್ದಿರುವುದು. ದಿನಬೆಳಗಾದರೆ ಪ್ರಸ್‌ನಲ್ಲಿ ನಿಮ್ಮ ಕಾಮೆಂಟ್ಸ್, ನೀವು ಮಾಡಿಲ್ಲವೇ? ನಿಮ್ಮದು ತನಿಖೆಯಾಗಲಿ, ನಾವು ಮಾಡಿದ್ದರೆ ನಮ್ಮದು ತನಿಖೆಯಾಗಲಿ, ಹೌದು, ಇಬ್ಬರೂ ಮಾಡಿದ್ದೀರಿ, ಇಬ್ಬರದ್ದೂ ತನಿಖೆಯಾಗಲಿ ಎಂದು ಹೇಳಲಿಕ್ಕೆ ನಾವಿಲ್ಲಿ ನಿಂತಿರುವುದು. ನಾವು ಸುಮ್ಮನಿದ್ದರೆ ಬೆಂಗಳೂರಿಗೆ ನಿಜವಾಗಲೂ ಈಗ ಉಳಿಗಾಲವಿಲ್ಲ. ಒಂದೊಂದೇ ಓದಿ, ಈಗ ರೋಷನ್‌ಬೇಗ್ ಸಾಹೇಬರು ಇಲ್ಲಿದ್ದಾರೆ, ನಿನ್ನೆ ಕೌನ್ಸಿಲ್‌ನಲ್ಲಿ ರೈಸ್ ಆಗಿದೆ, ವಿಂಡ್ಸರ್ ಮ್ಯಾನರ್ ಹೋಟೆಲ್ ವಕ್ಫ್ ಬೋರ್ಡ್‌ನವರ ಪ್ರಾಪರ್ಟಿಯಾಗಿದೆ, eviction ಆಗುವುದಿಲ್ಲ, ಬೊಂಬಡ ಹೊಡೆದುಕೊಂಡರೂ ಅದನ್ನು ಬಿಡಿಸುವವರು ಇಲ್ಲ, ಏಟ್ರಿಯಾ ಹೋಟಲ್ ಇದೆ, ನಿಮ್ಮ ಘನತವೆತ್ತ ರೆವಿನ್ಯೂ ಆಫೀಸರ್ ಬರೆದಿದ್ದಾರೆ, Atria Hotel is situatad in a Government Land. Evict ಮಾಡಿಸಿ ಎಂದು ಬರೆದಿದ್ದಾರೆ, ನನಗೆ ಈಗ ಗೊತ್ತಿಲ್ಲ, ಈಗಿರುವ ರೆವಿನ್ಯೂ ಕಮೀಷನರ್ ಏನೆಂದು ಕಾಗದ ಬರೆದಿದ್ದಾರೋ ಗೊತ್ತಿಲ್ಲ. ಹಿಂದೆ ನಾನು ಇಲ್ಲಿ ಇದ್ದಾಗ ಹೇಳಿದ್ದೆ. Atria Hotel is situated in a Government property .

Sri M.P. Prakash : The Deputy Commissioner is seized of the matter. He has issued notices to them. The hearing is going on.

ಶ್ರೀ ಜೆ. ಸಿ. ಮಾಧುಸ್ವಾಮಿ : ಸರಿ, ಇದನ್ನು ನೀವು ಮಾಡಬೇಕಲ್ಲವೇ? ನನಗೆ ಅನ್ನಿಸಿರುವ ಪ್ರಕಾರ, Even Hotel Ashoka is situated in a ownerless land. ಅದೂ ಕೂಡ ಇವತ್ತು ಅವರಿಗೆ ಸೇರಿದ ಪ್ರಾಪರ್ಟಿ ಮೇಲೆ ಇಲ್ಲ. ಇಲ್ಲಿ ನಿಮ್ಮ ರೇಸ್ ಕೋರ್ಸ್ 68 ಎಕರೆ ಇದ್ದದ್ದು.....

ಶ್ರೀ ಎಂ.ಪಿ. ಪ್ರಕಾಶ್ : ಅಶೋಕ ಹೋಟೆಲ್ ಸರ್ಕಾರದ ಇಡೀ ಕುಮಾರ ಕೃಪ ಪಾರ್ಕ್‌ನಲ್ಲಿರತಕ್ಕಂಥದ್ದು, ಐ.ಟಿ.ಡಿ.ಸಿ. ಗೆ ಲೀಸ್ ಮೇಲೆ ಕೊಟ್ಟಿದ್ದು, ಅವರಿಗೆ ಲೀಸ್ ಮೇಲೆ ಕೊಟ್ಟಿದ್ದನ್ನು ಖಾಸಗಿಯಾಗಿ ಮಾರಾಟ

ಮಾಡತಕ್ಕಂಥ ಸಂದರ್ಭದಲ್ಲಿ ಖರೀದಿ ಪತ್ರವನ್ನು ಬರೆದು ಕೊಟ್ಟಿರುವುದು, ಇದೆ, ಅದರಿಂದ ಅದು ಸರ್ಕಾರದ ಜಮೀನಿನಲ್ಲಿ ಕಟ್ಟಿರುವಂತಹದ್ದಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಲೀಸ್‌ಗೆ ಕೊಟ್ಟಿದ್ದನ್ನು ಹೇಗೆ ಅವರಿಗೆ ಜಮೀನನ್ನು ಸೇರಿಸಿ ಖರೀದಿ ಮಾಡಿಸಿಕೊಡುತ್ತೀರಿ? I fail to understand. ನನಗೆ ಅರ್ಥವಾಗಬೇಕು. ಜೆ.ಟಿ.ಡಿ.ಸಿ. ಅಥವಾ ಐ.ಟಿ.ಡಿ.ಸಿ. ಗೆ ಸರ್ಕಾರದ ಸ್ವಾಯತ್ತತೆ ಇದ್ದ ಸಂಸ್ಥೆಗೆ ಕೊಟ್ಟಿದ್ದೀರಿ, ಅಂತಹ ಪ್ರೈಮ್ ಲ್ಯಾಂಡ್ ಅನ್ನು ಅವರಿಗೆ ಕೊಟ್ಟು ನಿಮಗೇನು ಪ್ರಯೋಜನವಾಯಿತು? ..what is the land value fixed for them ದೆಹಲಿಯವರಿಗೆ ಎಷ್ಟು ಮೊತ್ತಕ್ಕೆ ಕೊಟ್ಟಿದ್ದೀರಿ? ಆ ಹೋಟೆಲ್‌ನಲ್ಲಿದ್ದ ಫರ್ನಿಚರ್ಸ್‌ಗಳನ್ನು ಕನಿಷ್ಠ ಎಷ್ಟಕ್ಕೆ ನೀವು ಮಾರಿದಿರಿ? ಉತ್ತರ ಇಲ್ಲಿ ಹೇಳುವಿರಾ? ಸಾರಾಸಗಟು ದೋಚಿಹೋಗಿದೆ. 83 ಎಕರೆ ಇರಬೇಕಾದ ರೇಸ್‌ಕೋರ್ಸ್ ಇವತ್ತು 68 ಎಕರೆ ಆಗಿದೆ, ನೀವೆಲ್ಲೋ ಒಂದೇ ಒಂದು ಕಡೆ ರೆವಿನ್ಯೂ ದಾಖಲೆಗಳನ್ನು ಸರಿಪಡಿಸಿಲ್ಲ. ಉಳಿದ ಜಾಗ ಎಲ್ಲಿ ಹೋಯಿತು? ಯಾರಾದರೂ ಬುದ್ದಿಯಿರುವವರು ಓದುತ್ತಾ ಕುಳಿತುಕೊಂಡರೆ where it has gone. 83 ಎಕರೆ ಜಮೀನು ಇರಬೇಕಾದ ರೇಸ್‌ಕೋರ್ಸ್ ಪ್ರಾಪರ್ಟಿ, it has been reduced to 67.2 acres.

ಶ್ರೀ ಎಂ.ಪಿ. ಪ್ರಕಾಶ್ : ಬಹಳ ಮುಖ್ಯವಾದ ಪ್ರಶ್ನೆಗಳನ್ನು ಇವರೆಲ್ಲಾ ಎತ್ತಿದ್ದಾರೆ. ಸುಮಾರು 150 ಕ್ಕಿಂತ ಹೆಚ್ಚು ಹಳ್ಳಿಗಳನ್ನು ಬೆಂಗಳೂರು ನಗರ ನುಂಗಿ ಬೆಂಗಳೂರು ಪಟ್ಟಣವಾಗಿದೆ . ಆ 150 ಹಳ್ಳಿಗಳ ದಾಖಲಾತಿಗಳು ಬಹಳ ವಿಚಿತ್ರವಾದಂಥ ರೀತಿಯಲ್ಲಿವೆ, ಅವುಗಳನ್ನು ಬೇಕು ಬೇಕಾದಂತ ಹವರು ತಿದ್ದಿರವಂತಹ ಪ್ರಕರಣಗಳು ಇವೆ, ಇದನ್ನು ತೋಳೆಯಲಿಕ್ಕೆ ಒಂದು ಜನ್ಮ ಕೂಡ ಸಾಕಾಗುತ್ತದೆಯೋ ಇಲ್ಲವೂ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪ್ರಯತ್ನವನ್ನಾದರೂ ಮಾಡಿ ಸರ್. ಸರ್ಕಾರವೇ ಈ ರೀತಿ ಒಪ್ಪಿಕೊಂಡ ಮೇಲೆ ನಮಗೆ ಮಾತನಾಡಲಿಕ್ಕೆ ಏನೂ ಉಳಿಯುವುದಿಲ್ಲ. My request, when you know things..

ಶ್ರೀ ಎಂ.ಪಿ. ಪ್ರಕಾಶ್ : ಸತ್ಯವನ್ನು ಒಪ್ಪಿಕೊಳ್ಳಲಿಕ್ಕೆ ಯಾವುದೇ ರೀತಿಯ ಮುಜುಗರವನ್ನು ಪಡಬೇಕಾದ ಅವಶ್ಯಕತೆಯಿಲ್ಲ , ಆದ್ದರಿಂದ 150 ಹಳ್ಳಿಗಳ ವಿಚಾರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಈ ಭೂಮಿಯ ಬೆಲೆ ಗಗನಕ್ಕೇರಿದ ಕಾರಣಕ್ಕಾಗಿ ಎಲ್ಲಾ ನಮೂನೆಯ ಕುತಂತ್ರಗಳು, ಎಲ್ಲಾ ನಮೂನೆಯ

ದಾಖಲೆಗಳು ಸೃಷ್ಟಿಯಾಗುವಂತಹದ್ದಾಗಿದೆ, ಕೆರೆಯ ಏರಿ, ಅಂಗಳ, ಬೆಟ್ಟ, ಕಾಡು, ಗುಡ್ಡ, ಗ್ರೀನ್ ಬೆಲ್ಟ್ ಇರತಕ್ಕಂಥದ್ದು ಇದರಲ್ಲಿ ಅವರು, ಇವರು ಅಂತಹ ಪ್ರಶ್ನೆಯಿಲ್ಲ, ನಾವೆಲ್ಲರೂ ಕೂಡ ನೀತಿಬಾಹಿರರಾಗಿ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿ ಚರ್ಚೆ ಮಾಡಲಿಕ್ಕೆ ನನಗೆ ಏನೂ ಉಳಿಸುತ್ತಿಲ್ಲ, ನಾನು ಬೆಂಗಳೂರು ಸುತ್ತಲಿರುವ ಜಮೀನು ಬಗ್ಗೆ ಚರ್ಚೆ ಮಾಡಲಿಕ್ಕೆ ಈಗ ನಿಂತಿರುವುದು,.. I demand an enquiry ಈಗ ನಮ್ಮ PIL ಮೇಲೆ ಇನ್‌ವೆಸ್ಟಿಗೇಷನ್ ಮಾಡಿದಾಗ ಇದೆಲ್ಲಾ ರಿವೀಲ್ ಆಯಿತೆಂದು ನೀವೇನು ಹೇಳಿದ್ದೀರಿ, ಹಾಗೆ ಈ ಶಾಸನಸಭೆಯಲ್ಲಿ ನಿಂತು ಮಾತನಾಡಿದ ಮೇಲೆ ಇಂತಿಂಥ ಜಾಗಗಳು ನಮ್ಮದಲ್ಲವೆಂದು ರಿವೀಲ್ ಆಯಿತು ಎಂದು ಒಪ್ಪಿಕೊಳ್ಳುವಂತಹ ಸ್ಥಿತಿಯನ್ನು ಈ ರಾಜ್ಯಕ್ಕೆ ತನ್ನಿ, ತಾವು ಕಂದಾಯ ಸಚಿವರು ಸಮರ್ಥರಿದ್ದೀರಿ, ವಿಷಯವೆಲ್ಲಾ ನಿಮಗೆ ಗೊತ್ತಿದೆ. ಈ ತರಹ ಹಗಲು ದರೋಡೆ ಆಗುತ್ತಿದೆಯೆಂದು ಸರ್ಕಾರ ಹೇಳಿ ಸುಮ್ಮನಿದ್ದರೆ ಆಗುತ್ತದೆಯೇ, ಸರ್ಕಾರ ಎನ್ನಿಸಿಕೊಳ್ಳುತ್ತದೆಯೇ? you must check it. ನೀವು ಇದನ್ನು ಸ್ಟಾಪ್ ಮಾಡಬೇಕು? ಇಲ್ಲದಿದ್ದರೆ ನಾವ್ಯಾಕೆ ಇಲ್ಲಿ ನಿಂತು ಮಾತನಾಡಬೇಕು?

ಶ್ರೀ ಎಂ.ಪಿ. ಪ್ರಕಾಶ್ : ಈಗ ಇಂತಹ ವಿಚಾರಗಳು ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದರೆ, ಆ ಕಡೆಗೆ ಗಮನ ಕೊಟ್ಟು ಕೆಲಸವನ್ನು ಮಾಡುತ್ತಿದ್ದೇವೆ. ಎರಡು ಎಕರೆ ಜಮೀನನ್ನು ಅಲ್ಲಿ ನಾವು ಯಾಲಂ ಮಾಡಿದಾಗ 15.00 ಕೋಟಿ ರೂಪಾಯಿ ಬಂದಿದೆ, ಅದೇರೀತಿಯಲ್ಲಿ ಈ ವಾರದೊಳಗೆ ಮತ್ತೊಂದನ್ನು ಯಾಲಂ ಮಾಡುತ್ತಿದ್ದೇವೆ, ನಗರಸಭೆಗೆ ಪಾರ್ಕ್ ಎಂದು ಕೇಳುತ್ತಾರೆ, ನೀವು ಈ ವಿಚಾರವನ್ನು ಬಿಟ್ಟು ಬೇರೆ ಕಡೆಗೆ ಹೋದಿರಿ, ಅಶೋಕ ಹೋಟೆಲ್, ಮತ್ತೆ ಇನ್ನೊಂದು ಬೇರೆ ವಿಷಯಕ್ಕೆ ಹೋದಿರಿ, ಆ ವಿಷಯಗಳಿಗೆ ಉತ್ತರವನ್ನು ಕೊಟ್ಟಿವು. ಅಷ್ಟೆ, ಏಟ್ರಿಯಾ ಹೋಟೆಲ್ ಅಂದಿರಿ, ಅದಕ್ಕೆ ನಾವು ಉತ್ತರಿಸಿದೆವು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರು ಬೆಳಿಗ್ಗೆ ನನಗೆ ಅದೇಶವನ್ನು ಕೊಟ್ಟು ಹೋದರು, ಆದೊಂದನ್ನು ಮಾತನಾಡುವ ಹಾಗಿಲ್ಲವೆಂದು, ಆಗ ನೀವೂ ಸಹ ಇದ್ದಿರಿ, ನೀವೇ ಅದನ್ನು ರೈಸ್ ಮಾಡಿದಾಗ ರೆಕಾರ್ಡ್‌ನಲ್ಲಿದೆ, ಬೆಂಗಳೂರಿನ ಬೇರೆ ಬೇರೆ ಜಮೀನಿನ ವಿಷಯವನ್ನು ನೀವು ಪ್ರಸ್ತಾಪ ಮಾಡುವುದಾದರೆ.. ಅದನ್ನು ಆಮೇಲೆ ಹೇಳಿ, ನಾನು ಇಷ್ಟು ಮಾತನಾಡಿ ಮುಗಿಸಿಬಿಡುತ್ತೇನೆ. ಜಮೀನು ತೆಗೆದುಕೊಂಡಿದ್ದು ಆಗಿದೆ, ಬೇರೆಯವರಿಗೆ ಕೊಟ್ಟಿದ್ದಾಗಿದೆ, ಅದನ್ನು

ನಾವು ಸ್ಟೇಟಸ್ ಕೋ ಮೆಯಿನ್‌ಟೇನ್ ಮಾಡುತ್ತೇವೆಂದು ಕೋರ್ಟ್ ಮುಂದೆ ಒಪ್ಪಿ, ಈಗ ನೀವು ಅನಗತ್ಯ ಜಮೀನನ್ನು ವಾಪಸ್ ತೆಗೆದುಕೊಂಡಿಲ್ಲ. ಅನಗತ್ಯವಾದ ಜಮೀನನ್ನು ನಿಮ್ಮ ಅಲೈನ್‌ಮೆಂಟಿನಲ್ಲಿರುವಷ್ಟು ಬಿಟ್ಟು, ರಸ್ತೆಗಾಗುವಷ್ಟು ಬಿಟ್ಟು ಅಕ್ಸಪ್ಟೆಡ್ ಟೌನ್‌ಷಿಪ್ಸ್, ನಾನೇನೂ ವಿರೋಧ ಮಾಡುವುದಿಲ್ಲ. ಅಕ್ಸೆಪ್ಟೆಡ್ ಟೌನ್‌ಷಿಪ್ ಎಲ್ಲಿ ಆಗಿತ್ತು, ಅಲ್ಲಿಯ ಜಮೀನನ್ನು ಬಿಟ್ಟು, ಉಳಿದ ಜಮೀನನ್ನು ಸುಪರ್ದಿಗೆ ತೆಗೆದುಕೊಂಡಿಲ್ಲ. ಉಳಿದ ಜಮೀನಿನಲ್ಲಿದ್ದ ರೈತರಿಗೆ ರಕ್ಷಣೆ ಕೊಟ್ಟಿಲ್ಲ. ಉಳಿದ ಜಮೀನುಗಳಲ್ಲಿದ್ದ ರೈತರುಗಳ ಮೇಲೆ ಗುಂಡಾಗಿರಿ ಆಗುತ್ತಾ ಇದೆ. ಪೋಲಿಸ್ ದರ್ಬಾರ್ ನಡೆಯುತ್ತಾ ಇದೆ. ಒಂದು ಕಡೆ ಜಮೀನನ್ನು ವಾಪಸ್ ಕೊಡುತ್ತೇವೆಂದು ಗವರ್ನಮೆಂಟ್ ಆರ್ಡರ್ ಮಾಡುತ್ತೀರಿ, ಇನ್ನೊಂದು ಕಡೆ ಪೊಲೀಸಿನವರನ್ನು ಫೆನ್ಸಿಂಗ್ ಮಾಡುವುದಕ್ಕೆ ಕಳುಹಿಸುತ್ತೀರಿ. ಯಾರ ಇನ್‌ಸ್ಟ್ರಕ್ಷನ್ಸ್‌ನಲ್ಲಿ ಇದಾಗುತ್ತಿದೆ ಎಂಬುದು ನನಗೆ ಗೊತ್ತಾಗಬೇಕಲ್ಲಾ. I was very happy that Government has conceded my demand ಅಂತ ಅಲ್ಲಿಗೆ ನಿಮ್ಮದು ನಿಲ್ಲಲಿಲ್ಲ. 30 ಎಕರೆಯಲ್ಲಿ ನೆಲಮಂಗಲದ ಹತ್ತಿರ, ಮಾದನಾಯ್ಕನ ಹಳ್ಳಿಯಲ್ಲಿ ನೀವು ಫೆನ್ಸಿಂಗ್ ಮಾಡುವುದಕ್ಕೆ ಹೋದಿರಿ. which was too much. ಒಂದು ಕಿಲೋಮೀಟರ್ ಅದೇ ಇದೆ, ನಿಮ್ಮ ಇಂಟರ್‌ಚೇಂಜ್ ಏರಿಯಾದಿಂದ ಆ ಜಾಗ. ಏತಕ್ಕೆ ಮಾಡುತ್ತಿದ್ದೀರಿ? 2003 ರಲ್ಲಿ ಹೈಕೋರ್ಟಿನ ಆರ್ಡರ್ ಇದೆ.Status quo has to be maintained ಎಂದು. ಅದು ಅವರ ಪೊಸಿಷನ್‌ನಲ್ಲಿರುವ ಜಾಗ. ಎರಡನೇಯದು ಏನಾಯಿತು, ಯಾರಿಗೋ ಕೊಟ್ಟಿದ್ದೇವೆಂದು ಅವರು ಸುಳ್ಳು ಹೇಳಿ, ನಾವು ಪೊಸಿಷನ್ ಪ್ರೂವ್ ಮಾಡುತ್ತೇನೆ ಎಂಬುವರಿಗೆ ನೀವೇಕೆ ಶಾಮೀಲಾಗುತ್ತೀರಿ ಎಂಬುದನ್ನು ನಾವು ಕೇಳಬೇಕಲ್ಲಾ. ನೀವು ಶಾಮೀಲಾಗಿಲ್ಲವೆಂದರೆ, ಏಕೆ ತಡೆಯುತ್ತಾ ಇಲ್ಲವೆಂದು ಕೇಳಬೇಕಲ್ಲಾ. ಮೂರನೆಯದು, ಗವರ್ನರ್ ಇಷ್ಟೆಲ್ಲಾ ಬರೆದರೂ ಈ ಸರ್ಕಾರಕ್ಕೆ ಎಚ್ಚರ ಏಕೆ ಆಗಲಿಲ್ಲವೆಂದು ಕೇಳಬೇಕಲ್ಲಾ. ನನಗೆ, ಆವತ್ತು ಈ ಮಾಹಿತಿ ಇರಲಿಲ್ಲ. Hon`ble Governor has identified where excess land acquisition has taken place. ಅಂತ No botheration. ಇದೆಲ್ಲಾ ಇದ್ದಾಗ, ನಾನು ಒತ್ತಾಯ ಮಾಡುತ್ತೇನೆ. ಯಾರು ಯಾರು ಈ ಭೂಮಿಯ ಪ್ರಕರಣದಲ್ಲಿ ಭಾಗಿಗಳಾಗಿದ್ದಾರೆ, ಅವರ ಮೇಲೆ ತನಿಖೆಯನ್ನು ರಾಜ್ಯಸರ್ಕಾರ ಇನ್‌ಸ್ಟಿಟ್ಯೂಟ್ ಮಾಡಬೇಕು. ಏಕೆ ಅಂದರೆ, ನೀವು ಒಪ್ಪಿದ್ದೀರಿ. ಎಕ್ಸಸ್ ಆಗಿದೆ ಎಂದು

ಹೇಳಿದ್ದೀರಿ. ಅವತ್ತು ನೀವು ಹೇಳದೇ ಹೋದರೂ, ಆಮೇಲೆ ನೀವು ಹೇಳಿದ್ದೀರಿ. ಹೌದು, ಅವರು ಯಾವುದೇ ಮಟ್ಟದ ಅಧಿಕಾರಿಗಳು ಇರಬಹುದು, ಯಾವ ಕಾರಣಕ್ಕಾಗಿ ಎಕ್ಸಸ್ ಜಮೀನನ್ನು ಕೊಟ್ಟರು? ನಿಮ್ಮ ಅನಿಸ್ ಶ್ರೀರಾಜ್‌ರವರು ಇಲ್ಲೊಂದು ಕಾಗದ ಬರೆದಿದ್ದಾರೆ. ಅವರೊಂದು ಆರ್ಡರ್ ಪಾಸ್ ಮಾಡಿದ್ದಾರೆ. On behalf of NICEL ನಾನು ಡಿ–ನೋಟಿಫೈ ಮಾಡಿದೆ,.On behalf of NICEL .ನಾನು ನೋಟಿಫೈ ಮಾಡಿದೆ ಎಂದು. ಈವನ್ ಡಿ–ನೋಟಿಫಿಕೇಷನ್ ಗವರ್ನಮೆಂಟಿನಿಂದ ಅವರು ಮಾಡಲಿಲ್ಲವಂತೆ , He has recorded. He has recorded it on file. ಅವರ ಹೇಳಿಕೆ ಮೇಲೆಯೇ ನಾನು ಡಿ–ನೋಟಿಫೈ ಮಾಡಿದೆ ಲ್ಯಾಂಡ್ ಎಂದು. who is he ? What is he? ನೀವು ಮಾಡಬೇಕಾಗಿದ್ದು, ನೋಡಲ್ ಡಿಪಾರ್ಟ್‌ಮೆಂಟ್ ಪಿ.ಡಬ್ಲ್ಯು.ಡಿ. ಮಾಡಬೇಕಾಗಿತ್ತು, ರೆವಿನ್ಯೂ ಡಿಪಾರ್ಟಮೆಂಟಿನವರು ಮಾಡಬಹುದಾಗಿತ್ತು. ಸನ್ಮಾನ್ಯ ಸಿಂಧ್ಯರವರ ಕೈಕೆಳಗೆ ಇರುವ ಕೆ.ಐ.ಎ.ಡಿ.ಬಿ. ಮಾಡಿ ಅವರಿಗೆ ಏನು ಬೇಕೋ ಅದನ್ನು ವರ್ಗಾವಣೆ ಮಾಡುವುದು ಅಥವಾ ವಾಪಸ್ ತೆಗೆದುಕೊಂಡು ಮಾಡುವುದು ನಿಮ್ಮ ಕೈಯಲ್ಲಿ ಇತ್ತು. ಈ ಜಾಗದಲ್ಲಿ ಒಂದು ರಸ್ತೆ ಹೋಗುತ್ತೆ ಎಂದರೆ, ಇಡೀ ಸರ್ವೆ ನಂಬರನ್ನೇ ಅಕ್ವೈರ್ ಮಾಡುವುದೇ? It has happened. ಈಗ ಹೌದು ನಾನು.I am seized of the matter. .ಏಕೆಂದರೆ, ಹೈಕೋರ್ಟಿನಲ್ಲಿದೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಒತ್ತಾಯ ಮಾಡುತ್ತೇನೆ. ಈಗೇನು ನಿಮ್ಮ ಅಲೈನ್‌ಮೆಂಟ್ ಏರಿಯಾದಿಂದ ಆಚೆ ಇರುವ ಜಾಗವನ್ನು ಗವರ್ನಮೆಂಟ್ ಒಪ್ಪಿಕೊಂಡು, ನಾವು ಅದನ್ನು ರೈತರಿಗೆ ಬಿಡುತ್ತೇವೆಂದು ಹೇಳಿದ್ದಾರೆ, ತಕ್ಷಣಕ್ಕೆ ಕ್ರಮ ಜರುಗಿಸುತ್ತೀರಾ? ಯಾರು ಯಾರು ಈ ಹಗರಣದಲ್ಲಿ ಭಾಗಿಗಳಾಗಿದ್ದಾರೆ, ಅವರ ಮೇಲೆ ನೀವು ಕ್ರಮ ಜರುಗಿಸುತ್ತೀರಾ? ಇದರಂತೆ ಭೂ ಹಗರಣಗಳೇನು ಬೆಂಗಳೂರಿನಲ್ಲಿ ಆಗಿವೆ ಆ ಬಗ್ಗೆ ಕೂಡ ತನಿಖೆ ಮಾಡಿಸಿ, ನಿಷ್ಪಕ್ಷವಾದ ವರದಿಯನ್ನು ಶಾಸನಸಭೆಯ ಮುಂದೆ ಕೊಡುತ್ತೀರಾ? ತಕ್ಷಣಕ್ಕೆ ನೆಲಮಂಗಲ ಸಮೀಪ ಮಾದನಾಯ್ಕನ ಹಳ್ಳಿಯಲ್ಲಿ ಏನು ಎನ್‌ಕ್ರೋಚ್ ಮಾಡುತ್ತಿದ್ದಾರೆ, ಅದನ್ನು ಏನಾದರೂ ಮಾಡಿ ಒಂದು ಅದೇಶ ಕೊಟ್ಟು ನಿಲ್ಲಿಸುತ್ತೀರಾ? ನಿಮ್ಮ ಇಂಟರ್‌ಚೇಂಜ್ ಏರಿಯ, ರೋಡ್ ಏರಿಯಾ, ಲಿಂಕ್ ರೋಡ್, ಪೆರಿಫೆರಲ್ ಏರಿಯ ಇಷ್ಟನ್ನು ಬಿಟ್ಟು, ಬೇರೆ ಎಲ್ಲೆಲ್ಲಿ ಜಮೀನು ಇದೆ, ತಕ್ಷಣಕ್ಕೆ ಒಂದು ಸರ್ಕಾರ ಅದೇಶವನ್ನು ಇಷ್ಯೂ ಮಾಡಿ,

ನೀವೇ ಹಾಕಿರುವ ಪ್ರಮಾಣ ಪತ್ರವನ್ನು ಎಂಡಾರ್ಸ್ ಮಾಡುತ್ತೀರಾ? ಆ ಜನಗಳಿಗೆ ಏನಾದರೂ ನ್ಯಾಯ ಒದಗಿಸಿಕೊಡುತ್ತೀರಾ? ಕೊಡಬೇಕಾದರೆ, ಅವರಿಗೆ ಯಾವ ಕಾಸ್ಟ್‌ನಲ್ಲಿ ವಾಪಸ್ ಕೊಡುತ್ತೀರಿ ರಿಜಿಸ್ಟ್ರೇಷನ್ ವೆಚ್ಚವನ್ನು ಭರಿಸುವವರು ಯಾರು? ಇದೆಲ್ಲದರ ಬಗ್ಗೆ ಸರ್ಕಾರ ಒಂದು ಅದೇಶ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಬಹುಶ: ಕಳೆದ ಅವಧಿಯಲ್ಲಿ ನಡೆದಂಥ ಕೆಟ್ಟ ಸರ್ಕಾರ ಬಹುಶ: ಇಂಡಿಯಾ ದೇಶದಲ್ಲಿ ಇನ್ನೊಂದು ನಡೆಯುವುದಕ್ಕೆ ಸಾಧ್ಯವೇ ಇಲ್ಲ. ಹಾಕಿರುವ ಅಫಿಡೆವಿಟ್ ಮೇಲೆ, ಕೋರ್ಟಿನಲ್ಲಿ ಇದೆ ಎಂದಾಕ್ಷಣಕ್ಕೆ, I am influencing the matter or merits of the case, ಎಂದಲ್ಲ. ಅಫಿಡೆವಿಟನ್ನು ಯಾರಾದರೂ ಇವತ್ತು ಓದಿಬಿಟ್ಟರೆ, ನಿಜವಾಗಿಯೂ ಈ ರಾಜ್ಯದ ಪ್ರಜೆಯಗಿ ಉಳಿಯಬಾರದು. ಸಾವಿರಾರು ಎಕರೆ ಜಮೀನನ್ನು ಹ್ಯಾಂಡ್ ಓವರ್ ಮಾಡುವಾಗ ಪಿ.ಡಬ್ಲ್ಯು.ಡಿ. ಸೆಕ್ರೆಟರಿ ಕ್ಯಾಬಿನೆಟ್‌ಗೆ ತರದೇ ಕೊಟ್ಟಿದ್ದಾರೆಂದು ನೀವು ಕೋರ್ಟ್ ಮುಂದೆ ಹೇಳುತ್ತೀರಿ. ಸಾವಿರಾರು ಎಕರೆ ಡಿ–ನೋಟಿಫೈ ಮಾಡಬೇಕಾದರೆ ನಮಗೆ ಗೊತ್ತಿಲ್ಲದೆ ಅರ್ಥಮಿಟಿಕಲ್ ಮಿಸ್ಟೇಕ್ ಆಗಿದೆಯೆಂದು ಹೇಳುತ್ತೀರಿ. ಎರಡೂವರೆ ಸಾವಿರ ಎಕರೆಗೂ, ಸಾವಿರದ ನೂರು ಎಕರೆಗೂ ಅರ್ಥಮಿಟಿಕಲ್ ಮಿಸ್ಟೇಕ್ ಆಗುತ್ತದೆಯೇ? ಕ್ಯಾಬಿನೆಟ್ ಅಪ್ರೂವ್ ಮಾಡಿದಂಥ ಒಂದು ಅಫಿಡೆವಿಟ್‌ಗೆ ಈ ಸ್ಟೇಜ್ ಬಂದರೆ, what is the fate of the State? ಯಾರು ಇವರನ್ನು ನಂಬಿಕೊಂಡು ಈ ರಾಜ್ಯದಲ್ಲಿ ಉಸಿರಾಡಿಕೊಂಡು ಜೀವನ ಮಾಡುವುದಕ್ಕಾಗುತ್ತೆ? ಏನು ಮಾಡಬೇಕಾಗುತ್ತೇ ನಮ್ಮ ಜಮೀನುಗಳು ಯಾರೋ ಎತ್ತಿಕೊಂಡು ಹೋಗುವುದು, ಕೇಳಿದರೆ ಈ ರೀತಿ ಹೇಳುವುದು, ಕೇಳದಿದ್ದರೆ ಅವರ ಸುಪರ್ದಿಗೆ ತೆಗೆದುಕೊಳ್ಳುವಂಥ ಸ್ಥಿತಿ ನಿರ್ಮಾಣವಾಗಿರುವುದು; ಇಂತಹ ಹಗರಣ ಹಲವಾರು ನಡೆದಿವೆ. ವಿಧಾನ ಪರಿಷತ್ತಿನಲ್ಲಿ ಅರ್ಕಾವತಿ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಅಲ್ಲಿಯೂ ಹಾಗೆಯೇ. ಎಷ್ಟು ಬೇಕೋ ತೆಗೆದುಕೊಂಡಿರಿ, ಎಷ್ಟು ಬೇಕೋ ಡಿ–ನೋಟಿಫೈ ಮಾಡಿದಿರಿ. ಏನು ಬೇಕೋ ಮಾಡಿದಿರಿ ಬಿಲ್ಡಿಂಗ್ ಇರುವ ಕಡೆಗಳಲ್ಲೇ ನೋಟಿಫೈ ಮಾಡಿದಿರಿ ಆಗಲೇ ಸೈಟ್ ಫಾರಂ ಆಗಿರುವ ಕಡೆಗಳಲ್ಲಿ ನೋಟಿಫೈ ಮಾಡಿದಿರಿ. ಯಾವುದೇ ಏರಿಯಾಕ್ಕೆ ಹೋಗಿ. ಈಗ ನೀವೇನು ಏರ್‌ಪೋರ್ಟ್‌ಗೆ ರನ್ ವೇ ಮಾಡುತ್ತಿದ್ದೀರಿ, ಅಲ್ಲಿ ವಾಸ ಮಾಡುವವರೆಲ್ಲರೂ ಸೇರಿ ಒಂದು ಕಾಗದ ಬರೆದಿದ್ದಾರೆ. ಇಲ್ಲಿ ರನ್ ವೇ ಆಗುತ್ತೆ, ನಾವು ಇಲ್ಲಿ ಜೀವನ ಮಾಡುವುದಕ್ಕಾಗುವುದಿಲ್ಲ. ನಮಗೇನಾದರೊಂದು ಪರ್ಯಾಯ ವ್ಯವಸ್ಥೆ ಮಾಡುವುದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳಿದ್ದಾರೆ.

ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬರಬೇಕು ಬೇಡ ಎಂದು ಯಾರೂ ವಿರೋಧ ಮಾಡುವುದಿಲ್ಲ. But what is their fate? ನೀವು ಅಲ್ಲಿ ರನ್‌ವೇ ಮಾಡುತ್ತೀರಿ. ಆ ಕಡೆಯವರು, ಈ ಕಡೆಯವರು ಏನು ಮಾಡಬೇಕೆಂಬುದನ್ನು ಸರ್ಕಾರ ಹೇಳಬೇಕಲ್ಲಾ. You are a Government. You have to rehabilitate them. ಏನೂ ಯೋಚನೆ ಮಾಡುವಹಾಗೆ ಇಲ್ಲ. ನಮಗೆ ನಾಲ್ಕುಸಾವಿರ ಎಕರೆ ಜಮೀನು ಬೇಕು, ಅಕ್ವೈರ್ ಮಾಡಿದೆವು, ಏರ್‌ಪೋರ್ಟಿಗೆ ಇಷ್ಟು ಇಟ್ಟೆವು, ರನ್‌ವೇಗೆ ಇಷ್ಟು ಇಟ್ಟೆವು, ನಾವು ತೆಗೆದುಕೊಂಡು ಬಿಟ್ಟೆವು, ಎಂದು ನಾವಿಲ್ಲಿ ಸಮಾಧಾನಪಟ್ಟಕೊಂಡರೆ, ಅಲ್ಲಿ ಏರ್‌ಪೋರ್ಟ್ ಆಗುತ್ತದೆ. But what can that man do? ಅಲ್ಲಿರುವವನ ಜೀವನದ ಗತಿ ಏನು? ವೈಭವವೇ ಬೇರೆ, ವಾಸ್ತವವೇ ಬೇರೆ. ವಾಸ್ತವದಲ್ಲಿರುವವನಿಗೆ ತಾವು ಏನಾದರೂ ಮಾಡಬೇಕಲ್ಲಾ. ಇವತ್ತು ಏರ್‌ಪೋರ್ಟ್‌ಗೆ ರನ್ ವೇ ಮಾಡುತ್ತಿರುವ ಜಾಗದಲ್ಲಿ ಏನು ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೀರಿ? ನಾವು ಜೀವನ ಮಾಡುವುದಕ್ಕೆ ಮುಂದೆ ಕಷ್ಟ ಆಗುತ್ತೆ, ನಮ್ಮ ಮನೆಗಳ ಮೇಲೆ ಇಷ್ಟು ಶಬ್ದ ಆಗುತ್ತೆ, ನಮ್ಮ ಮನೆ ಮುಂದೆ ಏರೋಪ್ಲೇನ್ ಲ್ಯಾಂಡ್ ಆಗುವಾಗ, ಟೇಕ್ ಆಫ್ ಆಗುವಾಗ ನಮಗೆ ಇಷ್ಟು ತೊಂದರೆಯಾಗುತ್ತೆ ಎಂದು ಕೇಳುವವರೇ ಇಲ್ಲ, ಆ ಕಡೆ ಚಿಂತನೆಯೇ ಮಾಡಿಲ್ಲ ಎಂದು ಆ ಜನ ಹೇಳುತ್ತಿದ್ದಾರೆ. ಇದೆಲ್ಲಾ ಏನು ಹಗರಣ ಆಗುತ್ತಿದೆ, ಸರ್ಕಾರ ನೇರವಾಗಿ ಇದರಲ್ಲಿ ಶಾಮೀಲಾಗಿದೆ, ಅನಿವಾರ್ಯ ಕಾರಣಗಳಿಂದ ಈಗ ಒಪ್ಪಿಕೊಂಡುಬಿಟ್ಟಿದೆ. ನಾವು ಮಾಡಿದ್ದು ತಪ್ಪು ಎಂದು. ಆವತ್ತು, ಅವರು ಹೇಳಿರಲಿಲ್ಲ. ಕಾಗದದಲ್ಲಿ "ಜೇನು" ಎಂದು ಬರೆದರೆ, ತುಟಿಗೆ ಜೇನು ಆಗುವುದಿಲ್ಲ. "ಜೇನುತುಪ್ಪ" ಎಂದು ಅಲ್ಲಿ ಬರೆದು ಅಂಟಿಸಿದರೆ, ನಮ್ಮ ತುಟಿ ಸಿಹಿಯಾಗುತ್ತದೆಯೇ? ನೀವು ತುಟಿಯನ್ನೇ ಸಿಹಿ ಮಾಡಬೇಕೆಂದರೆ, ದಯಮಾಡಿ take an action to denotify the lands. Take an action to give back the lands if at all already acquired ಇಲ್ಲದೇ ಇದ್ದರೆ, ಇದು ನಿಜವಾಗಿಯೂ ದೊಡ್ಡ ದುರಂತಕ್ಕೆ ಸರ್ಕಾರವನ್ನು ಮತ್ತು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತೀರಿ ಎಂದು ಹೇಳುತ್ತೇನೆ. ಅಧ್ಯಕ್ಷರೆ, ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಕಂದಾಯ ಸಚಿವರು, ನಾವಿನ್ನೂ ವಿಶ್ವಾಸ ಇಟ್ಟಿರುವಂಥವರು. ಈಗೇನು ಕೆ.ಸಿ.ರೆಡ್ಡಿ ಸಮಿತಿ ವರದಿಯನ್ನು ಸಚಿವ ಸಂಪುಟದಲ್ಲಿ ಒಪ್ಪಿಕೊಂಡಿದ್ದೀರಿ, ಸರ್ಕಾರ ಆದೇಶ ಮಾಡಿದ್ದೀರಿ, ತಕ್ಷಣ ಅದನ್ನು ಇಂಪ್ಲಿಮೆಂಟ್ ಮಾಡಬೇಕು. ತಕ್ಷಣ ಆ ಜಮೀನು

ಮಾಲೀಕರಿಗೆ ಆ ಜಮೀನುಗಳು ವಾಸ್ತವವಾಗಿ ಯಾರು ಯಾರಿಗೆ ಸೇರಬೇಕೋ ಅವರಿಗೆ ವಾಪಸ್ ಕೊಡಬೇಕು. ವಿತ್ ಕಾಸ್ಟ್ ಅವರು ಕೊಡಬೇಕು. ಹಾಗೂ ಡ್ಯಾಮೇಜುಗಳನ್ನು ಸರ್ಕಾರ ಭರಿಸಿಕೊಡಬೇಕಾಗುತ್ತೆ, ಆ ಕೆಲಸವನ್ನು ನೀವು ಮಾಡುತ್ತೀರಾ ಎಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕಾ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ, ಅವರು ಇಂಟರ್‌ನ್ಯಾಷನಲ್ ಏರ್ ಪೋರ್ಟ್‌ನಿಂದ ಹಿಡಿದು, ನೈಸ್ ಕಂಪನಿಯಿಂದ ಹಿಡಿದು, ಅಶೋಕ ಹೋಟೆಲ್‌ನ ಮಾರಾಟದ ಬಗ್ಗೆಯೂ ಸಹಿತ ಪ್ರಸ್ತಾಪ ಮಾಡಿದ್ದಾರೆ. ಮಧ್ಯದಲ್ಲಿ ಏಟ್ರಿಯ ಹೋಟೆಲ್‌ನದ್ದೂ ಸಹಿತ ಬಂತು. ಈಗ ದೇವನಹಳ್ಳಿ ಏರ್‌ಪೋರ್ಟ್‌ಗೆ ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ, 4 ಸಾವಿರ ಎಕರೆ ಜಮೀನು ಸರ್ಕಾರ ವಶಪಡಿಸಿಕೊಂಡಿಲ್ಲ. ಅದರಲ್ಲಿ ಎರಡು ಸಾವಿರ ಎಕರೆ ಜಮೀನು ಸರ್ಕಾರದ ಜಮೀನು ಇತ್ತು. ಇನ್ನು ಎರಡು ಸಾವಿರ ಎಕರೆ ಖಾಸಗಿ ಜಮೀನು ಇತ್ತು ಈ ಹಿಂದೆ ಡೆಪ್ಯುಟಿ ಕಮೀಷನರ್,ರೈತರನ್ನೆಲ್ಲಾ ಕರೆದು ಪರಿಹಾರ ಎಷ್ಟು ಕೊಡಬೇಕೆಂಬುದನ್ನು ನಿರ್ಧಾರ ಮಾಡಿ, ಅದರ ಪ್ರಕಾರವಾಗಿ ಪರಿಹಾರ ಕೊಟ್ಟಿದ್ದಾರೆ. ನನಗೆ ಗೊತ್ತಿರುವಹಾಗೆ, ಕೆಲವು ಕನ್‌ಸಲ್ಟ್ ಅವಾರ್ಡ್ ಕೂಡ ಆಗಿದೆ. ರೈತರೂ ಸಹಿತ ಒಪ್ಪಿದ್ದಾರೆ. ಯಾವುದಾದರೂ ರಿಹ್ಯಾಬಿಲಿಟೇಷನ್ ಸಮಸ್ಯೆ ಇದ್ದರೆ, ಅದು ನೇರವಾಗಿ ನನ್ನ ಇಲಾಖೆಗೆ ಬರುತ್ತದೆ, ತಾವು ದಯವಿಟ್ಟು ತಮಗೆ ಬಂದಿರತಕ್ಕ ಪತ್ರದ ನಕಲನ್ನು ಕಳುಹಿಸಿಕೊಡಿ. ಆ ರೈತರನ್ನು ಕರೆದು ಅನ್ಯಾಯವಾಗದ ಹಾಗೆ ನೋಡಿಕೊಳ್ಳುತ್ತೇವೆಂಬ ವಿಚಾರವನ್ನು ಹೇಳುತ್ತೇನೆ. ಶಬ್ದದಿಂದ ಆಗತಕ್ಕಂಥಾದ್ದಕ್ಕೆ ಮತ್ತೆ ಅಲ್ಲಿರತಕ್ಕ ಮನೆಗಳಿಗೆ ಪರಿಹಾರವನ್ನು ಕೊಡುವುದನ್ನೂ ಸಹಿತ ನಾನು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ. ಈಗಾಗಲೇ ಬೆಂಗಳೂರಿನಲ್ಲಿ ಒಂದು ಏರ್‌ಪೋರ್ಟ್‌ಇದೆ. ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಾಂಬೆಯಲ್ಲಿದೆ, ಏರ್‌ಪೋರ್ಟ್ ಹುಬ್ಬಳ್ಳಿಯಲ್ಲೂ ಇದೆ. ಅಲ್ಲೆಲ್ಲಾ ಪರಿಹಾರ ಕೊಡುವುದಕ್ಕಾಗುತ್ತದೆಯೇ? ತಾವೇ ದಯವಿಟ್ಟು ಯೋಚನೆ ಮಾಡಿ. ಅದರಿಂದ ಸ್ಪಾಟ್ ಆಫ್ ದಿ ಡೆವಲಪ್‌ಮೆಂಟ್ ಆಗಬೇಕಾಗುತ್ತದೆ. ಏಟ್ರಿಯಾ ಹೋಟೆಲ್ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಈಗಾಗಲೇ ಕಂದಾಯ ಸಚಿವರು ಹೇಳಿದ್ದಾರೆ. ಮತ್ತೆ ಕಂದಾಯದ ರೆಕಾರ್ಡುಗಳನ್ನೆಲ್ಲಾ ಸರಿಯಾಗಿಟ್ಟು ಕೊಳ್ಳಬೇಕೆಂಬ ಸಲಹೆಯನ್ನು ಏನು ಕೊಟ್ಟಿದ್ದೀರಿ, ಆ ಸಲಹೆಯನ್ನು ಖಂಡಿತವಾಗಿ ಗಮನದಲ್ಲಿಟ್ಟು ಕೊಳ್ಳುತ್ತೇವೆ. ನಿಮಗಿನ್ನೂ ಮಾನ್ಯ

ಪ್ರಕಾಶ್‌ರವರಲ್ಲಿ ಕೊನೆಪಕ್ಷ ವಿಶ್ವಾಸವಿರುವುದರಿಂದ, ಅವರು ಕಂದಾಯ ಇಲಾಖೆ ಮಂತ್ರಿಗಳಾಗಿರುವುದರಿಂದ, ಅವುಗಳನ್ನು ಇಡುತ್ತಾರೆಂಬುದನ್ನು ಹೇಳುತ್ತೇನೆ. ಬೆಂಗಳೂರು–ಮೈಸೂರು ಕಾರಿಡಾರ್ ಪ್ರಾಜೆಕ್ಟ್ ಬಗ್ಗೆ ನಮ್ಮದು ಸ್ಪಷ್ಟವಾದ ನಿರ್ಧಾರ ಇದೆ. ನಮಗೆ ಪ್ರಾಜೆಕ್ಟ್ ಬಗ್ಗೆ ವಿರೋಧ ಇಲ್ಲ. ಪ್ರಾಜೆಕ್ಟ್ ಆಗಲೇಬೇಕೆಂಬುದು ಸರ್ಕಾರದ ನಿಲುವು. ಅದಕ್ಕೆ ಎಷ್ಟು ಜಮೀನು ಬೇಕೆಂಬುದನ್ನು ತಿಳಿಯಲು, ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೇವೆ. ಅವರು ಎರಡು ವರದಿಯನ್ನು ಕೊಟ್ಟಿದ್ದಾರೆ. ಮೊದಲನೇ ವರದಿಯನ್ನು ನಾವು ಒಪ್ಪಿದ್ದೇವೆ. ಎರಡನೇ ವರದಿಯನ್ನೂ ಸಹ ಒಪ್ಪಿದ್ದೇವೆ. ಮೂರನೆಯದಾಗಿ, ತಾವು ಬಹಳ ಪ್ರಮುಖವಾಗಿ ಕೇಳುತ್ತಿರತಕ್ಕಂಥಾದ್ದು ಈಗ ಅಕ್ರಮ ಮಾಡಿರತಕ್ಕಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ತಮ್ಮ ವಿಚಾರ ಏನಿದೆ, 30ನೇ ತಾರೀಖು ಸಾಯಂಕಾಲ ನಡೆದ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದೇವೆ. ತಾವು ಕೊಟ್ಟಿರತಕ್ಕ ವಿಚಾರಗಳನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ಈ ಸರ್ಕಾರ ಯಾರಿಗೋ ರಕ್ಷಣೆ ಮಾಡಬೇಕೆಂಬುದು ಇಲ್ಲ. ಆ ಯೋಜನೆಗೆ ಬೇಕಾಗಿರುವಷ್ಟು ಜಮೀನನ್ನು ನಾವು ಕೊಟ್ಟೇಕೊಡುತ್ತೇವೆ. ಯೋಜನೆ ಕಾರ್ಯಗತಗೊಳ್ಳುವ ಹಾಗೆ ಮಾಡುತ್ತೇವೆ. ಅಕ್ರಮವಾಗಿ ಯಾರಾದರೂ ತಪ್ಪು ಮಾಡಿದ್ದರೆ, ಅವರ ಮೇಲೆ ಕಾನೂನಿನ ಪ್ರಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಇದರಿಂದ ಸಮ್ಮಿಶ್ರ ಸರ್ಕಾರದ ಮೇಲೆ ಯಾವುದೇ ಪರಿಣಾಮವಾಗಿಲ್ಲ. ಸರ್ಕಾರ ಕೆಲಸ ಮಾಡುವುದರ ಬಗ್ಗೆ ಅಥವಾ ಸರ್ಕಾರದ ಡಿಸಿಷನ್ಸ್ ಬಗ್ಗೆ ಯಾವುದೇ ರೀತಿಯ ಇನ್‌ಫ್ಲೂಯೆನ್ಸ್ ಇಲ್ಲ ಎನ್ನತಕಂಥಾದ್ದನ್ನು ಸ್ಪಷ್ಟ ಮಾಡಲಿಕ್ಕೆ ನಾನು ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಕೇಳಿದ್ದು ಅದು ಯಾವುದೂ ಅಲ್ಲ, ಯಾವುದು ಅನಾವಶ್ಯಕವಾಗಿ ನಿಮ್ಮ ಕೆ.ಸಿ.ರೆಡ್ಡಿ ವರದಿಯಿಂದ ಆಚೆ ಇರುವ ಜಮೀನು ಇದೆ, ಆ ಜಮೀನನ್ನು ಆ ಜಮೀನು ಮಾಲೀಕರಿಗೆ ವಾಪಸ್ಸು ಕೊಡಿಸುವುದಕ್ಕೆ ನೀವು ಕ್ರಮ ಜರುಗಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈಗ ಮುಖ್ಯಮಂತ್ರಿಗಳು ಇಲ್ಲ. ಸಚಿವ ಸಂಪುಟದ ವರದಿಯನ್ನು ಸಂಪೂರ್ಣವಾಗಿ ನಾವು ಒಪ್ಪಿಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಮಾನ್ಯ

ಲೋಕೋಪಯೋಗಿ ಮಂತ್ರಿಗಳೂ ಸಹ ಇಲ್ಲ. ಸರ್ಕಾರದ ಪರವಾಗಿ ನಾವು ಯಾರೇ ಉತ್ತರ ಕೊಟ್ಟರೂ ಅದು ಸರ್ಕಾರದ ಉತ್ತರವೇ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು 5 ಗಂಟೆಯಿಂದ ಇಲ್ಲಿ ಕುಳಿತಿದ್ದೇನೆ. ನಿಲುವಳಿ ಸೂಚನೆ ಕೊಟ್ಟು, ಅದು ನನ್ನ ಕೆಲಸವಲ್ಲ. ಯಾರೂ ಇಲ್ಲ ಅಂತ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದು ನನ್ನ ಕೆಲಸವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಚಿವ ಸಂಪುಟದ ಮುಂದೆ ಕೆ.ಸಿ.ರೆಡ್ಡಿಯವರು ಕೊಟ್ಟಿರತಕ್ಕಂಥ ವರದಿಯನ್ನು ನಾವು ಇಟ್ಟುಕೊಂಡಿದ್ದೇವೆ. ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು. ಏನು ಕ್ರಮ ತೆಗೆದುಕೊಳ್ಳಬೇಕು ಅಂತ ಸಚಿವ ಸಂಪುಟದಲ್ಲಿ ನಾವು ತೀರ್ಮಾನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಡಿಮ್ಯಾಂಡ್ ಮಾಡುತ್ತೇನೆ. ನಾನು ಮೂಲಭೂತವಾಗಿ ಕೇಳುತ್ತಿರುವ ಪ್ರಶ್ನೆಯೇ ಜಮೀನು ಮಾಲೀಕರು ಯಾರು ಈ ಏರಿಯಾದಲ್ಲಿ ಇಲ್ಲ ಇಂಟರ್ ಚೇಂಜ್ ಏರಿಯಾದಲ್ಲಿ ಇಲ್ಲ, ರಸ್ತೆ ಏರಿಯಾದಲ್ಲಿ ಇಲ್ಲ ಇದರಲ್ಲಿ ಇಲ್ಲ, ತಾವು ಏನು ಇನ್‌ಟೋಟೋ ಆ ವರದಿಯನ್ನು ಒಪ್ಪಿದ್ದೀರಿ. ಗೌರ್ನಮೆಂಟ್ ಆರ್ಡರ್ ಇಶ್ಯೂ ಮಾಡಿದ್ದೀರಿ, ಆ ರೈತರಿಗೆ ಏಕೆ ರಕ್ಷಣೆ ಕೊಡುವುದಿಲ್ಲ ಅಂತ, ನೀವು ರಕ್ಷಣೆ ಕೊಡಲೇಬೇಕಲ್ಲಾ. ನೀವು ಏತಕ್ಕೆ ರಕ್ಷಣೆ ಕೊಡುತ್ತಿಲ್ಲ? ಒಂದು ಕಡೆ ಗೌರ್ನಮೆಂಟ್ ಆರ್ಡರ್ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಆ ವರದಿಯನ್ನು ಸರ್ಕಾರ ಒಪ್ಪಿ 48 ಗಂಟೆ ಆಗಿದೆ. ಮೊನ್ನೆ ಸಾಯಂಕಾಲ ನಾವು ಇದನ್ನು ಸಚಿವ ಸಂಪುಟದ ಮುಂದೆ ತಂದು ವಿಚಾರಮಾಡಿರತಕ್ಕಂಥದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ನಾನು ಎರಡನೇ ವರದಿ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮುಂದೆ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಎರಡನೇ ವರದಿ ಬಗ್ಗೆ ಮಾತನಾಡುತ್ತಿಲ್ಲ. ಮೊದಲನೇ ವರದಿಯಲ್ಲಿ ಒಪ್ಪಿರುವುದನ್ನೇ ತಾವು ರಕ್ಷಣೆ ಕೊಟ್ಟಿಲ್ಲ. ದಯಮಾಡಿ ನೀವು ರಕ್ಷಣೆಗೆ ಬರಬೇಕು. ನೀವು ಹೇಳಿದ್ದೀರಲ್ಲಾ, ಇಂತಿಂತಹ ಜಾಗವನ್ನು ಬಿಟ್ಟು ಮಿಕ್ಕಿದ್ದನ್ನು ನಾವು ಅವರಿಗೆ ಹ್ಯಾಂಡ್ ಓವರ್ ಮಾಡುತ್ತೇವೆ ಅಂತ. ನೀವು ಕೆ.ಸಿ. ರೆಡ್ಡಿ ವರದಿಯಲ್ಲಿ ಏನು ಹೇಳಿದ್ದೀರಿ,

ದಯಮಾಡಿ ಅದರಂತೆ ಮಾಡಿ, ಏಕೆ ಮಾಡುವುದಿಲ್ಲ ಅಂತ ನಾನು ಕೇಳುವುದು, ಒಂದುಕಡೆ ವರದಿ ಒಪ್ಪುತ್ತೀರಿ, ಇನ್ನೊಂದು ಕಡೆ ನಮ್ಮ ಜಮೀನು ಅಕ್ವೈರ್ ಮಾಡುತ್ತೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸರ್ಕಾರದ ನಿಲುವು ಏನು ಎನ್ನುವುದು ಈ ವಿಚಾರದಲ್ಲಿ ನಾವು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಮೂಲಕ ಸರ್ಕಾರದ ನಿಲುವು ಏನು ಎನ್ನುವುದನ್ನು ಹೈಕೋರ್ಟ್‌ಗೆ ತಿಳಿಸಿದ್ದೇವೆ. ಈಗ ಸಧ್ಯದಲ್ಲಿಯೇ ಕೋರ್ಟ್‌ನಿಂದ ಕೂಡ ಅದರ ಬಗ್ಗೆ ತೀರ್ಮಾನವಾಗುತ್ತದೆ. ಈ ಮಧ್ಯೆದಲ್ಲೂ ಸಹ ಮಾನ್ಯ ಮಾಧುಸ್ವಾಮಿಯವರು ಏನು ಹೇಳಿದ್ದಾರೆ ರೈತರ ರಕ್ಷಣೆಗೆ ಹೋಗಬೇಕು ಮತ್ತು ಆ ಭೂ ಮಾಲೀಕರು ಯಾರು ಆ ಭೂಮಿಯನ್ನು ಕಳೆದುಕೊಂಡಿದ್ದಾರೆ ಅವರ ರಕ್ಷಣೆಗೆ ಹೋಗಬೇಕು ಅನ್ಯಾಯ ಆಗಬಾರದು ಎನ್ನತಕ್ಕಂಥ ಸಲಹೆಕೊಟ್ಟಿದ್ದಾರೆ, ಅದನ್ನು ಸಹ ಸರ್ಕಾರ ಪರಿಶೀಲಿಸುತ್ತದೆ.

ಉಪಾಧ್ಯಕ್ಷರು : ಶ್ರೀ ದಿನೇಶ್ ಗುಂಡುರಾವ್..... ಇಲ್ಲ, ಶ್ರೀ ಹಚ್.ಡಿ. ಕುಮಾರಸ್ವಾಮಿಯವರೇ ತಾವು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) : ಮಾನ್ಯ ಅಧ್ಯಕ್ಷರೆ, ನನಗೆ ಒಂದು ವಿಷಯದಲ್ಲಿ ಕ್ಲಾರಿಪಿಕೇಷನ್ ಬೇಕು. ಈಗ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಈಗ ನೈಸ್ ಕಂಪನಿಯ ಬಗ್ಗೆ, ಬೆಂಗಳೂರು ಮತ್ತು ಮೈಸೂರು ಕಾರಿಡಾರ್ ಇಶ್ಯೂ ಬಗ್ಗೆ ಸವಿಸ್ತಾರವಾಗಿ ಅಲ್ಲಿ ಆಗಿರತಕ್ಕಂಥ, ಸರ್ಕಾರದಲ್ಲಿ ಹಂತ ಹಂತವಾಗಿ ತೆಗೆದುಕೊಂಡಿರತಕ್ಕಂಥ ನಿರ್ಧಾರಗಳ ಬಗ್ಗೆ ಸದನದ ಮುಂದೆ ಅವರು ಮಂಡನೆ ಮಾಡಿದ್ದಾರೆ, ಇವತ್ತು ಏನು ಸರ್ಕಾರ ತೆಗೆದುಕೊಂಡಿರತಕ್ಕಂಥ ನಿರ್ಧಾರಗಳ ಬಗ್ಗೆ ಒಂದು ಕಡೆ ಅದರ ಆ ನೈಸ್ ಕಂಪನಿಯ ಮಾಲೀಕರು ಕಳೆದ 15–20 ದಿವಸಗಳಿಂದ ಏನು ಈ ಒಂದು ವಿಷಯದಲ್ಲಿ ಚರ್ಚೆ ಶುರುವಾಗಿರತಕ್ಕಂಥಾದ್ದು ಕೆಲವು ಪ್ರಭಾವಿ ವ್ಯಕ್ತಿಗಳು ಈ ಒಂದು ರಸ್ತೆಯಲ್ಲಿ ಬರತಕ್ಕಂಥ ಏರಿಯಾದಲ್ಲಿ ಏನು ಜಮೀನುಗಳನ್ನು ಹೊಂದಿದ್ದಾರೆ ಆ ಪ್ರಭಾವೀ ವ್ಯಕ್ತಿಗಳು ಈ ಒಂದು ಕೆಲಸವನ್ನು ಮಾಡಲಿಕ್ಕೆ ಅಡಚಣೆ ಮಾಡುತ್ತಿದ್ದಾರೆ ಎನ್ನುವ ಒಂದು ಅಪಾದನೆಯನ್ನು ಏನು ದಿನೇ ದಿನೇ ಪದೇ ಪದೇ ಪತ್ರಿಕೆಗಳಲ್ಲಿ ಏನು ಹೇಳಿಕೆಗಳನ್ನು ಕೊಡುತ್ತಿದ್ದಾರೆ ಅದೇ ರೀತಿ ಸಾರ್ವಜನಿಕರು ಇವತ್ತು ಒಂದು ಖಾಸಗಿ ಚಾನೆಲ್‌ನಲ್ಲಿ ಇವತ್ತು ಏನು ರಾಜ್ಯದಲ್ಲಿ ನಮ್ಮನ್ನು ಸದನಕ್ಕೆ ಕಳುಹಿಸತಕ್ಕಂಥ ಸಾಮಾನ್ಯ ನಾಗರೀಕರಲ್ಲಿ ಇವತ್ತು ರಾಜಕಾರಣಿಗಳು ಏನು ರಾಜ ಕಾರಣಕ್ಕೆ ಬರುವಂತಹವರು,

ಮಂತ್ರಿಗಳಾಗಿರತಕ್ಕಂಥವರು ಜವಾಬ್ದಾರಿ ಸ್ಥಾನಲ್ಲಿರತಕ್ಕಂಥವರು ಇವತ್ತು ದುಡ್ಡನ್ನು ಮಾಡಲಿಕ್ಕೆ ರಾಜಕಾರಣಕ್ಕೆ ಬರುತ್ತಾರೆ ಎನ್ನುವಂತಹ ಒಂದು ಮನೋಭಾವನೆ ಮೂಡುತ್ತಿದೆ. ಇವತ್ತು ಖಾಸಗಿ ಚಾನಲ್‌ನಲ್ಲಿ ಕೆಲವು ಎಲ್ಲಾ ನಾಗರೀಕರು ಅವರ ಒಂದು ಅಭಿಪ್ರಾಯವನ್ನು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಸದನದಲ್ಲಿ ಇವತ್ತು ಎಲ್ಲಾ ಹಿರಿಯ ಸದಸ್ಯರುಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಮನವಿ ಮಾಡಬಯಸುತ್ತೇನೆ, ಇವತ್ತು ಜನಗಳಲ್ಲಿ ಈ ಒಂದು ಸದನದಲ್ಲಿ ಇರತಕ್ಕಂಥವರು ಕೇವಲ ಹಣವನ್ನು ಮಾಡಲಿಕ್ಕೆ ಮಾತ್ರ ಬರತಕ್ಕಂಥವರು ಎನ್ನುವ ಒಂದು ವಾತಾವರಣ ನಿರ್ಮಾಣವಾಗಿದೆ ಅಂತ ಒಂದು ಭಾವನೆ ಸಾಮಾನ್ಯ ಜನರಲ್ಲಿ ಏನು ಈ ರಾಜ್ಯದಲ್ಲಿ ಮೂಡುತ್ತಿದೆ ಈ ನೈಸ್ ಕಂಪನಿ ವಿಷಯ ಇರಬಹುದು ಅದೇ ರೀತಿ ಹಲವಾರು ಬೆಂಗಳೂರು ನಗರ ಪ್ರತಿಷ್ಠಿತ ಹಾಗೂ ಬೆಲೆ ಬಾಳತಕ್ಕಂಥ ಜಾಗಗಳ ಬಗ್ಗೆ ಇವತ್ತು ಏನು ಹಲವಾರು ಗೊಂದಲಗಳು ಇವೆ ಇವತ್ತು ಸರ್ಕಾರ ತೆಗೆದುಕೊಂಡಿರತಕ್ಕಂಥ ನಿರ್ಧಾರದ ಬಗ್ಗೆ ಜನಗಳಲ್ಲಿ ಏನು ಒಂದು ಕೆಟ್ಟ ಭಾವನೆ ಮೂಡುತ್ತಿದೆ ಇದಕ್ಕೆ ಕಾರಣಗಳು ಏನು ಎನ್ನುವುದನ್ನು ಸರಿಯಾದ ರೀತಿ ಒಂದು ತೀರ್ಮಾನವನ್ನು ಈ ಸದನ ಮಾಡದೇ ಇದ್ದರೆ ಜನಗಳಲ್ಲಿ ಈ ಸದನದ ಬಗ್ಗೆ ಅಗೌರವ ಮೂಡತಕ್ಕಂಥ ವಾತಾವರಣ ನಿರ್ಮಾಣವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಪ್ರಭಾವಿ ವ್ಯಕ್ತಿಗಳು ಈ ಒಂದು ಭಾಗದಲ್ಲಿ ಜಮೀನು ಇರತಕ್ಕಂಥವರು ಈ ಒಂದು ರಸ್ತೆಯ ಕೆಲಸವನ್ನು ಮಾಡಲಿಕ್ಕೆ ಅಡಚಣೆ ಮಾಡುತ್ತಿದ್ದಾರೆ ಎನ್ನುವಂತಹ ಒಂದು ಕೂಗನ್ನು ಏನು ಹಬ್ಬಿಸುತ್ತಿದ್ದಾರೆ ಇವತ್ತು ಯಾರೋ ಪ್ರಭಾವಿ ವ್ಯಕ್ತಿಗಳು ಈ ಒಂದು ಭಾಗದಲ್ಲಿರುವಂಥ ಈ ಒಂದು ಬೆಂಗಳೂರು ಮೈಸೂರು ಕಾರಿಡಾರ್ ರಸ್ತೆ ನಿರ್ಮಾಣವಾಗತಕ್ಕಂಥ ಏನು ಒಂದು ಜಾಗ ಇದೆ ಆ ಒಂದು ಜಾಗದಲ್ಲಿರತಕ್ಕಂಥ ಪ್ರಭಾವಿವ್ಯಕ್ತಿಗಳು ಯಾರು, ಆ ಜಮೀನಿನ ಮಾಲೀಕರು ಯಾರು ಎನ್ನುವುದನ್ನು ಸರ್ಕಾರ ಸದನದ ಮುಂದೆ ಇಡಬೇಕು ಹಾಗೂ ಸಾರ್ವಜನಿಕರಿಗೆ ತಿಳಿಸಬೇಕಾಗುತ್ತದೆ. ಏಕೆಂದರೆ ಇವತ್ತು ಸಾರ್ವಜನಿಕರಲ್ಲಿ ಎಲ್ಲಾ ನಮ್ಮ ರಾಜಕಾರಣದ ಬಗ್ಗೆ ಈ ಸದನದ ಸದಸ್ಯರುಗಳ ಬಗ್ಗೆ ಈ ಒಂದು ಅಧಿಕಾರವನ್ನು ನಡೆಸುವವರ ಬಗ್ಗೆ ಅನುಮಾನ ಏನು ಮೂಡಿದೆ ಅದನ್ನು ಹೋಗಲಾಡಿಸಲಿಕ್ಕೆ ಯಾವ ಯಾವ ಪ್ರಭಾವಿ ವ್ಯಕ್ತಿಗಳು ಈ ಒಂದು ಭಾಗದಲ್ಲಿ ಮಾಲೀಕರಾಗಿದ್ದಾರೆ, ಜಮೀನಿನ ಒಡೆತನದಲ್ಲಿದ್ದಾರೆ ಎನ್ನುವುದನ್ನು ಸರ್ಕಾರ ಸಾರ್ವಜನಿಕವಾಗಿ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ

ಬಯಸುತ್ತೇನೆ. ಅದರ ಜೊತೆಗೆ 1995ನೇ ಇಸವಿಯಿಂದ ಇಲ್ಲಿಯವರೆಗೆ ನಿರ್ಧಾರಗಳು ಹಲವಾರು ಹಂತಗಳಲ್ಲಿ ಆಗಿವೆ ಹಾಗೂ ಬದಲಾವಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಇವತ್ತು ಮಾನ್ಯ ದೇವೇಗೌಡರ ಕಾಲದಿಂದ ಇಲ್ಲಿಯವರೆಗೂ ಯಾರ್ಯಾರು ಮುಖ್ಯಮಂತ್ರಿಗಳಾಗಿದ್ದರು ಯಾರ ಯಾರ ಕಾಲದಲ್ಲಿ ಈ ಒಂದು ನೈಸ್‌ಕಂಪನಿಯು ಬೆಂಗಳೂರು ಮೈಸೂರು ಕಾರಿಡಾರ್ ವಿಷಯದಲ್ಲಿ ಏನು ನಿರ್ಧಾರಗಳು ಆಗಿವೆ ಇದರಲ್ಲಿ ಯಾರು ತಪ್ಪಿತಸ್ಥರು ಎನ್ನುವುದರ ಬಗ್ಗೆ ತೀರ್ಮಾನವನ್ನು ಮಾಡತಕ್ಕಂಥ ವಿಷಯದಲ್ಲಿ ಯಾರೇ ತಪ್ಪಿತಸ್ಥರು ಇರಲಿ ಅವರಿಗೆ ಶಿಕ್ಷೆಯನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಅದನ್ನು ಮಾಡುವುದರ ಮುಖಾಂತರ ಈ ಒಂದು ವಿಷಯದಲ್ಲಿ ಸಾರ್ವಜನಿಕರಿಗೆ ಉಂಟಾಗಿರತಕ್ಕಂಥ ಅನುಮಾನವನ್ನು ಸರಿಪಡಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಎಲ್ಲಾ ನಮ್ಮ ಹಿರಿಯ ಸದಸ್ಯರಿಗೆ ಮತ್ತು ನಮ್ಮ ಸರ್ಕಾರಕ್ಕೆ ಅಧ್ಯಕ್ಷರ ಮುಖಾಂತರ ಮನವಿ ಮಾಡಲಿಕ್ಕೆ ಬಯಸುತ್ತೇನೆ. ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : 'ಬೇವರ್ಸಿ' ಪದದ ಅರ್ಥ ವಿಶ್ಲೇಷಣೆ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಕುಳಿತು ಚರ್ಚೆ ಮಾಡಿ ಆಡಳಿತ ಪಕ್ಷದವರು ಪ್ರತಿಪಕ್ಷದವರು ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಒಂದು ನಿರ್ಧಾರ ಮಾಡಿ ಊಟದ ನಂತರ ಈ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಬೇಕು ಅಂತ ನಾನು ಮಧ್ಯೆ ಪ್ರವೇಶ ಮಾಡಿದಾಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸಹ ಅದನ್ನು ಒಬ್ಬ ಸಚಿವರಾಗಿ ಮಾರ್ಗದರ್ಶನ ಮಾಡಿದರು. ಇಂತಹ ಮಹತ್ವವಾದ ವಿಷಯವನ್ನು 5 ಗಂಟೆ ಆದರೂ ಮುಂದೂಡಿಕೊಂಡು ಹೋಗುವಂತಹದ್ದು ಬಹುಶಃ ಈ ರಾಜ್ಯದ ಜನ ಸರ್ಕಾರ ಉದ್ದೇಶ ಪೂರ್ವಕವಾಗಿ ಇದರ ಬಗ್ಗೆ ಚರ್ಚೆ ಮಾಡದೇ ಅವರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆ ಎನ್ನುವ ಭಾವನೆಗೆ ಅವಕಾಶವಾಗುತ್ತದೆಂದು ನಾನು ಹೇಳಲಿಕ್ಕೆ ಹೊರಟಿದ್ದೇನೆ.